ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜೂನ್ 28, 2021

ಸಂಪುಟ : 48 ಸಂಚಿಕೆ : 45 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

## ವಾಯುಪಡೆಗೆ ಡ್ರೋನ್ ದಾಳಿ




### ಪಾಕಿಸ್ತಾನದ ಉಗ್ರರ ಕೈವಾಡದ ಶಂಕೆ

ಜಮ್ಮು, ಜೂ. 27 - ಜಮ್ಮು ವಿಮಾನ ನಿಲ್ದಾಣದ ವಾಯುಪಡೆ ಕೇಂದ್ರದ ಮೇಲೆ ಎರಡು ಸ್ಫೋಟಕ ತುಂಬಿದ ಡ್ರೋನ್‌ಗಳು ಭಾನುವಾರ ಬೆಳಗಿನ ಜಾವ ಬಡಿದಿವೆ. ಇದರ ಹಿಂದೆ ಪಾಕಿಸ್ತಾನದ ಉಗ್ರವಾದಿಗಳ ಕೈವಾಡ ಇದೆ ಎಂದು ಶಂಕಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬೆಳಿಗ್ಗೆ 1.40ರ ಸಮಯದಲ್ಲಿ ನಡೆದ ದಾಳಿಯಲ್ಲಿ ವಾಯುಪಡೆಯ ಇಬ್ಬರು ಸಿಬ್ಬಂದಿ ಗಾಯಗೊಂಡಿದ್ದಾರೆ. ಮೊದಲ ಸ್ಫೋಟದಿಂದ ಒಂದು ಮಹಡಿಯ ಕಟ್ಟಡದ ತಾರಸಿಗೆ ಹಾನಿಯಾಗಿದೆ. ಎರಡನೇ ಡ್ರೋನ್ ನೆಲದ ಮೇಲೆ ಬಿದ್ದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಾಯುಪಡೆ ಕೇಂದ್ರದ ಮೇಲೆ ಉಗ್ರವಾದಿ ದಾಳಿ ನಡೆಸಲಾಗಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಮುಖ್ಯಸ್ಥ ದಿಲ್‌ಬಾಗ್ ಸಿಂಗ್ ತಿಳಿಸಿದ್ದಾರೆ.

ದಾಳಿಯ ಹಿಂದಿನ ಸಂಚನ್ನು ಬಯಲಿಗೆಳೆಯಲು ಪೊಲೀಸರು ಹಾಗೂ ಇತರೆ ಸಂಸ್ಥೆಗಳ ಜೊತೆ ವಾಯುಪಡೆ ಅಧಿಕಾರಿಗಳು ಕಾರ್ಯ (2ನೇ ಪುಟಕ್ಕೆ)




॥ ಶಿವ ನಾರದಮುನಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ**

ಶೇರಾಪುರದ ಶ್ರೀ ಬೆನಕೇಶ್ ಮತ್ತು ಸಹೋದರರು
ಶಿವಮೊಗ್ಗ ರಸ್ತೆ, ಹರಿಹರ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 25.06.2021ನೇ ಶುಕ್ರವಾರ ಬೆಳಿಗ್ಗೆ 9.25ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಶಿವಮ್ಮ**
ಇವರು ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆ** ಯನ್ನು ದಿನಾಂಕ 29.06.2021ನೇ ಮಂಗಳವಾರ
ಬೆಳಗ್ಗೆ 11.30ಕ್ಕೆ ಹರಿಹರದ ಶಿವಮೊಗ್ಗ ರಸ್ತೆಯಲ್ಲಿರುವ ಶೇರಾಪುರ ಕಾಂಪೌಂಡ್‌ನಲ್ಲಿ
ನೆರವೇರಿಸಲಾಗವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತ ಕುಟುಂಬ ವರ್ಗ



# ಕೊರೊನಾ ನಿಯಂತ್ರಣ ಮಾಡುವಲ್ಲಿ ಸರ್ಕಾರ ಯಶಸ್ವಿ

## ಲಕ್ಕಶೆಟ್ಟಿಹಳ್ಳಿ : ಬಿಜೆಪಿ ರೈತ ಮೋರ್ಚಾ ಘಟಕ ವೃಕ್ಷಾರೋಪಣದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್



ಮಲೇಬೆನ್ನೂರು, ಜೂ.27 - ಲಕ್ಕಶೆಟ್ಟಿಹಳ್ಳಿ ಗ್ರಾಮದಲ್ಲಿ ಹರಿಹರ ತಾಲ್ಲೂಕು ಬಿಜೆಪಿ ರೈತ ಮೋರ್ಚಾ ಘಟಕದ ವತಿಯಿಂದ ಪ್ರಧಾನಿ ಮೋದಿ ಅವರ 'ಮನ್ ಕಿ ಬಾತ್' ಕಾರ್ಯಕ್ರಮ ವೀಕ್ಷಿಸಿ, ನಂತರ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ವೃಕ್ಷಾರೋಪಣ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಕೊರೊನಾ ನಿಯಂತ್ರಿಸುವಲ್ಲಿ ಬಿಜೆಪಿ ಸರ್ಕಾರ ಯಶಸ್ವಿಯಾಗಿದ್ದು, ಸಾರ್ವಜನಿಕರು ಮುಂದೆಯೂ ಸಹ ಜಾಗ್ರತರಾಗಿ ಪ್ರತಿಯೊಬ್ಬರೂ ತಪ್ಪದೇ ಲಸಿಕೆ ಪಡೆದುಕೊಳ್ಳಿ ಎಂದು ಮನವಿ ಮಾಡಿದರು.

ಪ್ರಧಾನಿ ಮೋದಿ ಅವರು ದೇಶದ ಅಭಿವೃದ್ಧಿ ಮತ್ತು ಭದ್ರತೆ ವಿಚಾರದಲ್ಲಿ ಉತ್ತಮ ನಿರ್ಧಾರಗಳನ್ನು ಕೈಗೊಂಡಿದ್ದಾರೆ. ಮುಂಬರುವ ಜಿ.ಪಂ., ತಾ.ಪಂ. ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿಗೆ ಕಾರ್ಯಕರ್ತರು ಈಗಿನಿಂದಲೇ ಕಾರ್ಯ ನಿರ್ವಹಿಸಬೇಕೆಂದು ಹರೀಶ್ ಕರೆ ನೀಡಿದರು.

ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಲಿಷ್ಠವಾಗಿದ್ದು, ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ಬಿಜೆಪಿ ಜಯಭೇರಿ ಭಾರಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹರಿಹರ ತಾ. ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಕೊಂಡಜ್ಜಿ ವೀರಣ್ಣ ಮಾತನಾಡಿ, ಶುದ್ಧ ಗಾಳಿ ಹಾಗೂ ನೀರನ್ನು ನಾವು ಪಡೆಯಬೇಕಾದರೆ ಗಿಡ-ಮರಗಳನ್ನು ಬೆಳೆಸಬೇಕು. ಅದಕ್ಕಾಗಿ ಬಿಜೆಪಿ ರೈತ ಮೋರ್ಚಾ ವೃಕ್ಷಾರೋಪಣ ಕಾರ್ಯಕ್ರಮದಡಿ ಎಲ್ಲಾ ಕಡೆ ಸಸಿ ನೆಡೆಸುತ್ತಿದೆ. ನಾವು ನೆಟ್ಟಿರುವ ಗಿಡಗಳನ್ನು ಮರಗಳನ್ನಾಗಿ ಬೆಳೆಸುವ ಜವಾಬ್ದಾರಿಯನ್ನು ನಮ್ಮ ಕಾರ್ಯಕರ್ತರು ತೆಗೆದುಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿದರು.

ಗ್ರಾ.ಪಂ. ಸದಸ್ಯರಾದ ಎನ್.ಎಂ. ನಾಗರಾಜ್, ಕರಿಬಸಮ್ಮ, ಮಲ್ಲಿಕಾರ್ಜುನಪ್ಪ, ನಗರಸಭೆ ಸದಸ್ಯ ರಜನಿ, ಹರಿಹರ ತಾ. ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಆದಾಪುರ ವೀರೇಶ್, ಕೆ.ಎನ್. ಹಳ್ಳಿ ಹುಗ್ಗಿ ಮಹಾಂತೇಶ್, ಬಿಜೆಪಿ ರೈತ ಮೋರ್ಚಾ ಕಾರ್ಯದರ್ಶಿ ಕಿರಣ್ ಮೂಲಿಮನಿ, ರಾಘವೇಂದ್ರ, ಲೋಕಿಕೆರೆ ಅಣ್ಣಪ್ಪ, ಗ್ರಾಮದ ಎಂ.ಜಿ. ಬಸವರಾಜ್, ಶಾಮನೂರು ವಿಜಯ್, ಸುರೇಶ್, ಷಣ್ಮುಖಪ್ಪ, ನಾಗಸನಹಳ್ಳಿ ಸುರೇಶ್, ಗುಳ್ಳೆಪ್ಪ, ಮಹೇಶಪ್ಪ ಮತ್ತಿತರರು ಭಾಗವಹಿಸಿದ್ದರು.

# ಕೋವಿಡ್ ನಡುವೆಯೂ ರೈಲ್ವೆ ಕಾರ್ಯನಿರ್ವಹಣೆ ವೆಚ್ಚ ಇಳಿಕೆ

ನವದೆಹಲಿ, ಜೂ. 27 - ಕೊರೊನಾ ನಡುವೆಯೂ ರೈಲ್ವೆ ಇಲಾಖೆಯು ತನ್ನ ಕಾರ್ಯನಿರ್ವಹಣೆ ವೆಚ್ಚವನ್ನು 2020-21ರಲ್ಲಿ ಕಡಿಮೆ ಮಾಡಿಕೊಂಡಿದೆ. ಪ್ರಯಾಣಿಕರ ರೈಲುಗಳು ಕಡಿಮೆಯಾಗಿರುವುದರಿಂದ ರೈಲ್ವೆ ಮೇಲಿನ ಸಬ್ಸಿಡಿ ಮತ್ತು ವಿನಾಯಿತಿ ವೆಚ್ಚ ಕಡಿತವಾಗಿರುವುದು ಇದಕ್ಕೆ ಕಾರಣ.

ಪ್ರತಿ 100 ರೂ. ಗಳಿಸಲು ರೈಲ್ವೆ ಮಾಡುವ ವೆಚ್ಚವನ್ನು ಕಾರ್ಯನಿರ್ವಹಣೆ ವೆಚ್ಚ ಎಂದು ಪರಿಗಣಿಸಲಾಗುತ್ತದೆ. ಕಾರ್ಯನಿರ್ವಹಣೆ ವೆಚ್ಚ ಕಡಿಮೆಯಾದಷ್ಟೂ ರೈಲ್ವೆಗೆ ಹೆಚ್ಚು ಲಾಭವಾಗುತ್ತದೆ. 2020-21ರಲ್ಲಿ ಕಾರ್ಯನಿರ್ವಹಣೆ ವೆಚ್ಚ ಶೇ.97.45 ರೂ. ಆಗಿದೆ. ಅದಕ್ಕೂ ಹಿಂದಿನ ವರ್ಷ ಕಾರ್ಯನಿರ್ವಹಣೆ ವೆಚ್ಚ ಶೇ.98.36 ರೂ. ಆಗಿತ್ತು. 2019-20ರಲ್ಲಿ ರೈಲ್ವೆ ಕಾರ್ಯನಿರ್ವಹಣೆ ವೆಚ್ಚ ಶೇ.98.36 ಆಗಿತ್ತು. 2020-21ರಲ್ಲಿ ಶೇ.97.45 ಆಗಿದೆ. ಪ್ರಯಾಣಿಕರ ವಿಭಾಗದಲ್ಲಿ ಆಗಿರುವ ಕೊರತೆಯನ್ನು ಸರಕು ಸಾಗಣೆ ವಿಭಾಗದಲ್ಲಿ ಸರಿದೂಗಿಸಲಾಗಿದೆ.

ಈ ಬಗ್ಗೆ ಮಧ್ಯ ಪ್ರದೇಶದ ಆರ್.ಟಿ.ಐ. ಕಾರ್ಯಕರ್ತ ಚಂದ್ರ ಶೇಖರ ಗೌರ್ ನೀಡಿರುವ ಅರ್ಜಿಗೆ ರೈಲ್ವೆ ಮಂಡಳಿ ಉತ್ತರಿಸಿದೆ. ಇಡೀ 2020-21ರಲ್ಲಿ ರೈಲ್ವೆ ತನ್ನ ಅತಿ ಹೆಚ್ಚು ಸಬ್ಸಿಡಿ ಹೊಂದಿರುವ ಪ್ರಯಾಣಿಕರ ರೈಲುಗಳನ್ನು ಹೆಚ್ಚಾಗಿ ನಿರ್ವಹಿಸಿಲ್ಲ.

ವರ್ಷಾಂತ್ಯದವರೆಗೆ ರೈಲ್ವೆಯ ಶೇ.65ರಷ್ಟು ಪ್ರಯಾಣಿಕರ ರೈಲುಗಳಲ್ಲಿ ಯಾವುದೇ ಸಬ್ಸಿಡಿ ನೀಡುತ್ತಿಲ್ಲ. ಇದೇ ವೇಳೆ, ಪ್ರಮುಖ ಮಾರ್ಗಗಳ ವಿದ್ಯುದೀಕರಣದಿಂದ 2019-20ರಲ್ಲಿ ರೈಲ್ವೆ 9,500 ಕೋಟಿ ರೂ.ಗಳ ಉಳಿತಾಯ ಮಾಡಿದೆ.

## ಮಕ್ಕಳ ಲಸಿಕೆಯಿಂದ ಶಾಲೆ ತೆರೆಯಲು ದಾರಿ

**(6ನೇ ಪುಟದಿಂದ)** ಪ್ರಮುಖ ಔಷಧೀಯ ಕಂಪನಿಯಾದ ಜೈಡಸ್ ಕ್ಯಾಡಿಲ ಶೀಘ್ರದಲ್ಲೇ ತನ್ನ ಕೊರೊನಾ ಲಸಿಕೆಯಾದ ಜೈಕೊವ್-ಡಿ ಪ್ರಯೋಗಕ್ಕೆ ಅನುಮತಿ ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಲಿದೆ. ಇದು ವಯಸ್ಕರು ಹಾಗೂ ಮಕ್ಕಳಿಬ್ಬರಿಗೂ ಲಭ್ಯವಾಗಲಿದೆ ಎಂದು ಹಿರಿಯ ಸರ್ಕಾರಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

## ಹರಿಹರದ ಸರ್ಕಾರಿ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಣೆ



ಹರಿಹರ, ಜೂ.27- ಎಪಿಎಂಸಿ ಆವರಣದಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ರಾಜ್ಯ ಸರ್ಕಾರದ ಕಲಿಕಾ ನಿರ್ವಹಣೆ ವ್ಯವಸ್ಥೆ ಯೋಜನೆಯಡಿ ವಿದ್ಯಾರ್ಥಿಗಳಿಗೆ ಸ್ಯಾಮ್‌ಸಂಗ್ ಟ್ಯಾಬ್ಲೆಟ್ ಪಿಸಿ ಉಪಕರಣಗಳನ್ನು ಶಾಸಕ ಎಸ್.ರಾಮಪ್ಪ ವಿತರಿಸಿದರು. ನಂತರ ಮಾತನಾಡಿದ ಶಾಸಕರು, ಈ ಕ್ಯಾಂಪಸ್‌ನಲ್ಲಿ ಸುಮಾರು 1 ಸಾವಿರ ವಿದ್ಯಾರ್ಥಿಗಳಿದ್ದು, ಜೊತೆಗೆ 3 ಹಾಸ್ಟೆಲ್‌ಗಳಿವೆ. ಇಲ್ಲಿಗೆ ಅವಶ್ಯವಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಶೀಘ್ರವೇ ಪ್ರಾರಂಭಿಸುವುದಾಗಿ ಭರವಸೆ ನೀಡಿದರು.

ಪಾಲಿಟೆಕ್ನಿಕ್ ಪ್ರಾಚಾರ್ಯ ಶಿವಕುಮಾರ ಸ್ವಾಮಿ ಮಾತನಾಡಿ, ಕಾಲೇಜಿನ 420 ವಿದ್ಯಾರ್ಥಿಗಳಿಗೆ ಟ್ಯಾಬ್ ಮಂಜೂರಾಗಿವೆ. ಆನ್‌ಲೈನ್ ಬೋಧನೆ, ಕಲಿಕೆಗೆ ಈ ಉಪಕರಣ ಉಪಯೋಗವಾಗಲಿದೆ ಎಂದು ಹೇಳಿದರು.

ಪಾಲಿಟೆಕ್ನಿಕ್‌ನ ವಿವಿಧ ವಿಭಾಗಗಳ ಮುಖ್ಯಸ್ಥರಾದ ಎಲ್.ವಿ.ಗಿರೀಶ್, ಶಾಂತಕುಮಾರ್ ನಾಯ್ಕ್, ಬಿ.ಪ್ರಕಾಶ್, ಕಚೇರಿ ಅಧೀಕ್ಷಕ ವಿಜಯಕುಮಾರ್, ನಜೀರ್ ಹುಸೇನ್ ಈ ವೇಳೆ ಹಾಜರಿದ್ದರು.

# ಪರಮಾತ್ಮನನ್ನು ಬೆಸೆಯುವ ಬಂಧವೇ ಯೋಗ



**ದೊಡ್ಡಬಾತಿ ತಪೋವನದ ಕಾರ್ಯಕ್ರಮದಲ್ಲಿ ಶಶಿಕುಮಾರ್ ಮೆಹರ್ವಾಡೆ**

ದೊಡ್ಡಬಾತಿ, ಜೂ.27- ಮುಕ್ತ ಆಹಾರ, ವಿಹಾರ, ಚಟುವಟಿಕೆ ಮೂಲಕ ನಿದ್ರೆ, ಸ್ವಪ್ನ, ಜಾಗೃತಿ ಸ್ಥಿತಿ ಮತ್ತು ಸಮಾಧಿ ಸ್ಥಿತಿಯನ್ನು ಆನಂದಿಸುವುದೇ ನಿಜವಾದ ಯೋಗ. ಯೋಗ ಜೀವಾತ್ಮ ಮತ್ತು ಪರಮಾತ್ಮನನ್ನು ಬೆಸೆಯುವ ಪವಿತ್ರ ಬಂಧ ಎಂದು ತಪೋವನ ಸಂಸ್ಥೆ ಅಧ್ಯಕ್ಷ ಡಾ. ಶಶಿಕುಮಾರ್ ಮೆಹರ್ವಾಡೆ ತಿಳಿಸಿದರು.

ದೊಡ್ಡಬಾತಿ ತಪೋವನದ ಸಭಾಂಗಣದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ 7ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆಹಾರ, ವಿಹಾರ ಕ್ರಿಯೆ ಯುಕ್ತವಾಗಿದ್ದಾಗ ಯೋಗ ದುಃಖವನ್ನು ಪರಿಹಾರ ಮಾಡುತ್ತದೆ ಎಂದು ಅವರು ಹೇಳಿದರು.

ಸಿಂಧುವಿನಿಂದ ಬೇರೆಯಾದ ಬಿಂದುವಿಗೆ ಯಾವ ರೀತಿ ಅಸ್ತಿತ್ವವಿಲ್ಲವೋ ಅದೇ ರೀತಿ ಆತ್ಮಕ್ಕೆ ಇರುತ್ತದೆ. ಮೂಲವನ್ನು ಸೇರುವ ತುಡಿತ ಸದಾ ಎಲ್ಲಾ ಜೀವಾತ್ಮಗಳಲ್ಲಿ ಇರುತ್ತದೆ. ಆ ಸೇರುವಿಕೆಗಳು ಯೋಗಕ್ಕೆ ಪೂರಕ ಎಂದು ಡಾ. ಶಶಿಕುಮಾರ್ ವಿಶ್ಲೇಷಿಸಿದರು.

ಔಷಧಿ ಜೊತೆ ಪಥ್ಯ ಹೇಗೆ ಮುಖ್ಯವೋ, ಅದೇ ರೀತಿ ನಿತ್ಯ ಜೀವನವೂ ಮುಖ್ಯ. ಒಂದು ಗಂಟೆ ಯೋಗ ಮಾಡಿ, ಉಳಿದ 23 ಗಂಟೆ ಪೂರಕ ಜೀವನ ನಡೆಸಿದರೆ, ಅಂತಹ ಯೋಗ ಯಾವ ಪ್ರಯೋಜನವೂ ನೀಡದು. ಇಡೀ ಬದುಕು ಯೋಗಮಯವಾಗಬೇಕು.

ಆದ್ದರಿಂದ ವರ್ಷಕ್ಕೊಮ್ಮೆ ಯೋಗ ದಿನಾಚರಣೆ ಮಾಡುವ ಬದಲು, ದಿನವೂ ಯೋಗಾಚರಣೆ ಮಾಡಿದರೆ ಉತ್ತಮ ಆರೋಗ್ಯ ಹೊಂದಬಹುದು ಎಂದು ಪ್ರತಿಪಾದಿಸಿದರು.

ಲೋಕಾಯುಕ್ತ ಎಸ್.ಪಿ ಜಯಪ್ರಕಾಶ್, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಹರಿಹರ ಸಿಪಿಐ ಸತೀಶ್, ದಾವಣಗೆರೆ ಗ್ರಾಮಾಂತರ ಸಿಪಿಐ ನಿಂಗನಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಅಂತರ್ಜಾಲವನ್ನು ಕೈಗಾರಿಕೆಯ ಪ್ರತಿ ಹಂತದಲ್ಲೂ ಬಳಸಬಹುದು

ದಾವಣಗೆರೆ, ಜೂ. 27 - ಅಂತರ್ಜಾಲವನ್ನು ಕೇವಲ ಮಾಹಿತಿ ಕ್ಷೇತ್ರದಲ್ಲಿ ಮಾತ್ರ ಬಳಕೆ ಮಾಡದೆ, ಕೈಗಾರಿಕೆಗಳಲ್ಲಿ ಪ್ರತಿ ಹಂತದಲ್ಲೂ ಬಳಸಬಹುದು ಎಂದು ಪ್ರೊ. ಹೆಚ್.ಎಲ್. ನಂದೀಶ್ ತಿಳಿಸಿದರು. ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಮೆಕ್ಯಾನಿಕಲ್ ವಿಭಾಗದಿಂದ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ಈಗ ಸೆನ್ಸಾರ್ಸ್, ಕಂಟ್ರೋಲ್ ಸಿಸ್ಟಮ್ ಮತ್ತು ಕ್ಲೌಡ್ ತಂತ್ರಜ್ಞಾನವು ವೇಗವಾಗಿ ಬೆಳೆಯುತ್ತಿದ್ದು, ಇವುಗಳನ್ನು ಮೆಷಿನ್‌ಗಳಿಗೆ ಅಳವಡಿಸಿ, ಉತ್ಪಾದನೆಯ ಪ್ರತಿ ಹಂತದಲ್ಲೂ ಬಳಸಬಹುದು. ಅಂತರ್ಜಾಲವನ್ನು ಬಳಸಿ ಮನೆಯಲ್ಲಿ ಬಳಸುವ ಎಲ್ಲಾ ವಿದ್ಯುತ್ ಚಾಲಿತ ಉಪಕರಣಗಳನ್ನು ಮೊಬೈಲ್‌ಗಳಿಂದಲೇ ನಿಯಂತ್ರಿಸಬಹುದು ಎಂದು ಅವರು ಹೇಳಿದರು.

ಈ ವೆಬಿನಾರನ್ನು ಮೆಕ್ಯಾನಿಕಲ್ ವಿಭಾಗದ 'ಪೊರಮೆಕ್' ನ ಒಂದು ಚಟುವಟಿಕೆಯಾಗಿ ಹರ್ಷ ಮತ್ತು ಸಂದೀಪ್ ಆಯೋಜಿಸಿದ್ದರು. ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಮತ್ತು ವಿಭಾಗದ ಮುಖ್ಯಸ್ಥ ಡಾ. ಸಿ.ವಿ. ಶ್ರೀನಿವಾಸ್ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಏರ್ಪಾಡಾಗಿತ್ತು.

## ಜ್ಞಾನಸಾಗರ ಕಾಲೇಜಿನಲ್ಲಿ ಕಿಟ್ ವಿತರಣೆ

ದಾವಣಗೆರೆ, ಜೂ.27- ಜ್ಞಾನಸಾಗರ ಪಿ.ಯು. ಕಾಲೇಜಿನಲ್ಲಿ ಬಡವರಿಗೆ ದಿನಸಿ ಕಿಟ್ ವಿತರಣೆ ಮಾಡಲಾಯಿತು. ಕಾಲೇಜು ಸಂಸ್ಥಾಪಕ ಕಾರ್ಯದರ್ಶಿ ಬಸವರಾಜ್ ಸಾಗರ್ ಕಿಟ್ ವಿತರಿಸಿದರು. ಕಾಲೇಜು ಪ್ರಾಚಾರ್ಯ ಪ್ರಸನ್ನಕುಮಾರ್ ಉಪಸ್ಥಿತರಿದ್ದರು.

## ಹಸಿದವರಿಗೆ ಸಹಾಯ ಮಾಡುವುದು ಪುಣ್ಯದ ಕೆಲಸ



ಹರಿಹರ, ಜೂ.27- ಸ್ಥಿತಿವಂತವರು ಬಡವರಿಗೆ ದಾನ ರೂಪದಲ್ಲಿ ನೆರವು ನೀಡುವುದು ಪುಣ್ಯದ ಕೆಲಸ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಎಸ್.ಎಂ. ವೀರೇಶ್ ಅಭಿಮಾನಿ ಬಳಗದಿಂದ ನಗರದಲ್ಲಿ ಮೊನ್ನೆ ಏರ್ಪಾಡಾಗಿದ್ದ ಸವಿತಾ ಸಮಾಜದ ಬಂಧುಗಳು ಮತ್ತು ಕುಂಬಾರ ಸಮಾಜದ ಬಡವರಿಗೆ ಆಹಾರ ಧಾನ್ಯದ ಕಿಟ್ ವಿತರಿಸಿ ಅವರು ಮಾತನಾಡಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಮಾತನಾಡಿದರು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯರುಗಳಾದ ಎನ್. ರಜನಿಕಾಂತ್, ಅಶ್ವಿನಿ ಕೃಷ್ಣ, ಎ.ಕೆ. ಹನುಮಂತಪ್ಪ, ಸುರೇಶ್ ತೆರೆದಹಳ್ಳಿ, ಸಿಪಿಐ ಸತೀಶಕುಮಾರ್, ಮುಖಂಡರಾದ ಬಾತಿ ಚಂದ್ರಶೇಖರ್, ಅಜಿತ್ ಸಾವಂತ್, ರಾಘವೇಂದ್ರ ಕೊಂಡಜ್ಜಿ, ತುಳಜಪ್ಪ ಭೂತೆ, ಹೆಚ್. ಮಂಜಾ ನಾಯಕ್, ಪ್ರವೀಣ್ ಪವಾರ್, ಸವಿತಾ ಸಮಾಜದ ಜಿಲ್ಲಾ ಅಧ್ಯಕ್ಷ ಬಾಲರಾಜ್, ತಾಲ್ಲೂಕು ಅಧ್ಯಕ್ಷ ಪಿ. ಹನುಮಂತಪ್ಪ, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಎಸ್. ಅನಿಲ್ ಕುಮಾರ್ ಕುಂಬಾರ ಸಮಾಜದ ಚಂದ್ರಶೇಖರ್ ಇನ್ನಿತರರಿದ್ದರು.

# ಸಂಕಷ್ಟದ ದಿನಗಳಲ್ಲಿ ಜನತೆಗೆ ನೆರವಾಗುವಂತೆ ಶ್ರೀಗಳ ಕರೆ



**ಹೊನ್ನಾಳಿ**

ಹೊನ್ನಾಳಿ, ಜೂ.27 - ಅನ್ಯರ ಸಂಕಷ್ಟಗಳಿಗೆ ನೆರವಾಗುವ ಮೂಲಕ ತಮ್ಮ ಜನ್ಮದಿನ ಹಾಗೂ ವಿವಾಹ ಮಹೋತ್ಸವಗಳನ್ನು ಆಚರಿಸಿಕೊಳ್ಳುವುದು ಹೆಚ್ಚು ಹರ್ಷವನ್ನು ತರಲಿದೆ ಎಂದು ಹೊನ್ನಾಳಿಯ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಅಕ್ಕಿಗಿರಣಿ ಮಾಲೀಕ ಹಾಗೂ ರಾಜ್ಯ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಹೆಚ್.ಎ. ಉಮಾಪತಿ ಅವರು ತಮ್ಮ 61ನೇ ವರ್ಷದ ಜನ್ಮದಿನ ಹಾಗೂ 26ನೇ ವರ್ಷದ ವಿವಾಹ ಮಹೋತ್ಸವದ ಅಂಗವಾಗಿ ಹಿರೇಕಲ್ಮಠದಲ್ಲಿ ಇಂದು ಹಮ್ಮಿಕೊಂಡಿದ್ದ ಪಟ್ಟಣದ ಪತ್ರಿಕಾ ವಿತರಕರಿಗೆ ಆಹಾರದ ಕಿಟ್ ವಿತರಣಾ ಸಮಾರಂಭದ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಹೆಚ್.ಎ. ಉಮಾಪತಿ ಮಾತನಾಡಿ, ಆಡಂಬರದ ದಿನಾಚರಣೆಯಲ್ಲಿ ಅರ್ಥವಿಲ್ಲ ಎಂದು ಭಾವಿಸಿ, ಬಸ್ ನಿಲ್ದಾಣದ ಬಳಿಯೇ ನಮ್ಮ ಮನೆ ಎದುರು ಸಣ್ಣ ಮಕ್ಕಳು ಮಳೆ ಚಳಿಗಾಳಿ ಎನ್ನದೆ ಮನೆ - ಮನೆಗಳಿಗೆ ಪತ್ರಿಕೆಗಳನ್ನು ವಿತರಣೆ ಮಾಡುತ್ತಿರುವುದನ್ನು ಮನೆಗಂಡು ಕೊರೊನಾ ಸಂಕಷ್ಟದ ದಿನಗಳಲ್ಲಿ ಇವರಿಗೆ ನೆರವಾಗುವ ತಮ್ಮ ಇಚ್ಛೆ ವ್ಯಕ್ತಪಡಿಸಿ ಈ ಕಾರ್ಯಕ್ಕೆ ಮುಂದಾಗಿರುವುದಾಗಿ ತಿಳಿಸಿದರು.

ಇದೇ ರೀತಿಯಾಗಿ ನಮ್ಮ ತಂದೆ-ತಾಯಿ ಹಳದಪ್ಪ ಶ್ರೀಮತಿ ಗಂಗಮ್ಮ ಇವರ ಹೆಸರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಸಮಿತಿಗೆ 50 ಸಾವಿರ ನೀಡುತ್ತಿದ್ದು, ಪ್ರತಿಭಾನ್ವಿತ ಮಕ್ಕಳ ಪ್ರೋತ್ಸಾಹಕ್ಕೆ ಇದು ಬಳಕೆಯಾಗಲಿ ಎಂದು ಅವರು ಕೇಳಿಕೊಂಡರು.

ಪತ್ರಕರ್ತ ಮೃತ್ಯುಂಜಯ ಪಾಟೀಲ್ ಪ್ರಾಸ್ತಾವಿಕ ಭಾಷಣ ಮಾಡಿದರು. ಸಭೆಯಲ್ಲಿ ಮಠದ ವ್ಯವಸ್ಥಾಪಕ ಚನ್ನಬಸಯ್ಯ, ಸುನೀತಾ ಉಮಾಪತಿ, ರಂಜಿತಾ ಮತ್ತಿತರರು ಇದ್ದರು.

# ಭಾವಪೂರ್ಣ ಶ್ರದ್ಧಾಂಜಲಿ



ಹರಿಹರ ತಾ. ಕುಂಬಳೂರು ಗ್ರಾಮದ ಕುರುಬ ಸಮಾಜ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರಾದ

**ಶ್ರೀ ವೈ. ಹುಚ್ಚರಾಯ** (50 ವರ್ಷ)

ಇವರು ದಿನಾಂಕ 27.06.2021 ರ ಭಾನುವಾರ ರಾತ್ರಿ 8.30ಕ್ಕೆ ದಾವಣಗೆರೆಯ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.06.2021ರ ಸೋಮವಾರ ಬೆಳಿಗ್ಗೆ 9 ಗಂಟೆಗೆ ಕುಂಬಳೂರಿನಲ್ಲಿ ನೆರವೇರಲಿದೆ. ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಅವರ ಅಗಲಿಕೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.

**ಮಾಗಾನಹಳ್ಳಿ ಹಾಲಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಕುಂಬಳೂರು.**

# ವಾಯುಪಡೆಗೆ ಡ್ರೋನ್ ದಾಳಿ

**(1ನೇ ಪುಟದಿಂದ)** ನಿರ್ವಹಿಸುತ್ತಿದ್ದಾರೆ. ರಾಷ್ಟ್ರೀಯ ತನಿಖಾ ಸಂಸ್ಥೆಯ ಉಗ್ರವಾದ ವಿರೋಧಿ ತಂಡವೊಂದು ಸ್ಥಳಕ್ಕೆ ತಲುಪಿದೆ ಎಂದವರು ಹೇಳಿದ್ದಾರೆ.

ದಾಳಿಯಲ್ಲಿ ವಾಯುಪಡೆಯ ಇಬ್ಬರು ಸಿಬ್ಬಂದಿಗೆ ಸಣ್ಣ ಗಾಯಗಳಾಗಿವೆ. ಅವರನ್ನು ವೈದ್ಯಕೀಯ ನಿಗಾದಲ್ಲಿರಿಸಲಾಗಿದ್ದು, ಆರೋಗ್ಯ ಸ್ಥಿರವಾಗಿದೆ ಎಂದು ವಾಯುಪಡೆ ಅಧಿಕಾರಿಗಳು ಹೇಳಿದ್ದಾರೆ.

ಪಾಕ್ ಉಗ್ರರು ಡ್ರೋನ್ ಬಳಸಿ ದಾಳಿ ನಡೆಸಿರುವುದು ಇದೇ ಮೊದಲು. ಈ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ವಹಿಸಿಕೊಳ್ಳಲಿದೆ ಎಂದು ಮೂಲಗಳು ಹೇಳಿವೆ.

ಎಲ್ಲಿಂದ ಡ್ರೋನ್‌ಗಳು ಬಂದಿವೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಡ್ರೋನ್ ಮಾರ್ಗವನ್ನು ಪತ್ತೆ ಮಾಡಲು ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಗಡಿಯಿಂದ ಜಮ್ಮು ವಿಮಾನ ನಿಲ್ದಾಣ ವೈಮಾನಿಕವಾಗಿ 14 ಕಿ.ಮೀ. ದೂರದಲ್ಲಿದೆ.

ಈ ನಡುವೆ, ಆರು ಕೆಜಿ ಸ್ಫೋಟಕದೊಂದಿಗೆ ಲಷ್ಕರ್ ಎ ತೊಯ್ಬಾ ನಿಷೇಧಿತ ಸಂಘಟನೆಗೆ ಸೇರಿದ ವ್ಯಕ್ತಿಯೋರ್ವನನ್ನು ಬಂಧಿಸಲಾಗಿದೆ.

ಇದರಿಂದ ಪ್ರಮುಖ ದಾಳಿಯನ್ನು ತಪ್ಪಿಸಿದಂತಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಶಂಕಿತ ಜನನಿಬಿಡ ಪ್ರದೇಶದಲ್ಲಿ ಬಾಂಬ್ ಸಿಡಿಸುವ ಸಂಚು ನಡೆಸಿದ್ದ. ಈ ಪ್ರಕರಣದ ಹಿಂದೆ ಇನ್ನಷ್ಟು ಜನರಿರುವ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದವರು ತಿಳಿಸಿದ್ದಾರೆ.

ಜಮ್ಮು ದಾಳಿಯ ನಂತರ ಪಂಜಾಬ್‌ನಲ್ಲಿರುವ ಪಠಾಣ್‌ಕೋಟ್ ವಾಯುಪಡೆ ನೆಲೆಯಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಐದು ವರ್ಷಗಳ ಹಿಂದೆ ಪಠಾಣ್‌ಕೋಟ್ ನೆಲೆಯ ಮೇಲೆ ಉಗ್ರವಾದಿ ದಾಳಿ ನಡೆದಿತ್ತು.

## ಹೊನ್ನಾಳಿಯಲ್ಲಿ ಇಂದು ಆಕ್ಸಿಜನ್ ಪ್ಲಾಂಟ್ ಉದ್ಘಾಟನೆ



ಹೊನ್ನಾಳಿ, ಜೂ.27- ಹೊನ್ನಾಳಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಿರ್ಮಿಸಲಾಗಿರುವ ಆಕ್ಸಿಜನ್ ಪ್ಲಾಂಟ್ ಸ್ಥಳಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ನಿನ್ನೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ನೂತನ ಆಕ್ಸಿಜನ್ ಘಟಕದ ಉದ್ಘಾಟನೆಯನ್ನು ನಾಳೆ ದಿನಾಂಕ 28ರ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ನೆರವೇರಿಸಲಿದ್ದು, ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ ರೇಣುಕಾಚಾರ್ಯ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ.

ಕೆಎಸ್‌ಡಿಎಲ್ ನಿಗಮದ ರೂ.1 ಕೋಟಿಗಳ ಅನುದಾನದಲ್ಲಿ ಆಕ್ಸಿಜನ್ ಪ್ಲಾಂಟ್, ಜನರೇಟರ್ ನಿರ್ಮಾಣ ಕಾಮಗಾರಿ ಮುಕ್ತಾಯವಾಗಿದ್ದು, ಆಕ್ಸಿಜನ್ ಪ್ಲಾಂಟ್ ನಿನ್ನೆ ಸಂಜೆ ತರಲಾಗಿದೆ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.


ಈಗಾಗಲೇ ಸರ್ಕಾರಿ ಆಸ್ಪತ್ರೆಗೆ 63 ಕೆವಿ ವಿದ್ಯುತ್ ವ್ಯವಸ್ಥೆಯಿದ್ದು, ಆಕ್ಸಿಜನ್ ಪ್ಲಾಂಟ್‌ಗೆ ಅವಶ್ಯವಿರುವ 150 ಕಿಲೋ ವ್ಯಾಟ್ ಆಂಪಿಯರ್ ವಿದ್ಯುತ್ ಸಂಪರ್ಕ ಕಲ್ಪಿಸಲು ಕೆಇಬಿ ಎಂಜಿನಿಯರ್‌ಗೆ ಸೂಚಿಸಲಾಗಿದೆ. ಆಕ್ಸಿಜನ್ ಪ್ಲಾಂಟ್ ಒಂದು ನಿಮಿಷಕ್ಕೆ 500 ಕೆ.ಎಲ್ ಆಕ್ಸಿಜನ್ ಉತ್ಪಾದನೆ ಮಾಡುವ ಸಾಮರ್ಥ್ಯ ಹೊಂದಿದ್ದು, ಇದರಿಂದ ಪದೇ ಪದೇ ಉಂಟಾಗುತ್ತಿದ್ದ ಆಕ್ಸಿಜನ್ ಸಮಸ್ಯೆ ನಿವಾರಣೆಯಾಗಲಿದೆ ಎಂದು ಅವರು ಹೇಳಿದರು.

ಟ್ರೈಯಿನ್ ಕಂಪೆನಿಯ ಆಕ್ಸಿಜನ್ ಪ್ಲಾಂಟ್ ಟೆಕ್ನಿಕಲ್ ಎಂಜಿನಿಯರ್ ನಾಗೇಂದ್ರ ಪ್ರಸಾದ್ ಮಾತನಾಡಿ, ಆಕ್ಸಿಜನ್ ಪ್ಲಾಂಟ್ ನಿರ್ವಹಣೆಗಾಗಿ ಇಬ್ಬರು ವೈದ್ಯರು ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಿ, ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ತಹಶೀಲ್ದಾರ್ ಬಸನಗೌಡ ಕೋಟೂರ, ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಚಂದ್ರಪ್ಪ, ಭೂಸೇನಾ ನಿಗಮದ ಕೆಂಚಪ್ಪ, ದಂತ ವೈದ್ಯೆ ಡಾ.ಲೀಲಾವತಿ, ಸಿಬ್ಬಂದಿ ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

## ಭಾವಪೂರ್ಣ ಶ್ರದ್ಧಾಂಜಲಿ





ದಿನಾಂಕ 15.06.2021ರಂದು ನಿಧನರಾದ ಶ್ರೀ ಬಸವೇಶ್ವರ ದೇವಸ್ಥಾನ ಮತ್ತು ಶ್ರೀ ಆಂಜನೇಯ ದೇವಸ್ಥಾನದ ಕಮಿಟಿ ಸದಸ್ಯರುಗಳಾದ

**ಊರಬಾಗಿಲ ಶ್ರೀ ಎಸ್. ನಿಜಲಿಂಗಪ್ಪ** ಅವರಿಗೂ

ಹಾಗೂ ದಿನಾಂಕ 21.06.2021ರಂದು ನಿಧನರಾದ

**ಶ್ರೀ ಚನ್ನಬಸವಳ್ಳಿ ಬಸವರಾಜಪ್ಪ** ಅವರಿಗೂ


ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಬಸಾಪುರದ ಶ್ರೀ ಬಸವೇಶ್ವರ ದೇವಸ್ಥಾನ ಮತ್ತು ಶ್ರೀ ಆಂಜನೇಯ ದೇವಸ್ಥಾನದ ಕಮಿಟಿ ಮತ್ತು ಬಸಾಪುರ ಗ್ರಾಮಸ್ಥರು**

## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 26.06.2021 ರಂದು ನಿಧನರಾದ ನಮ್ಮ ಆತ್ಮೀಯರಾದ


**ಶ್ರೀ ಶಾಮನೂರು ಧನ್ಯಕುಮಾರ್**



ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಹೆಚ್.ಆರ್. ಲಿಂಗರಾಜ್** ಶಾಮನೂರು
ಜಿಲ್ಲಾ ಅಧ್ಯಕ್ಷರು, ಭಾರತೀಯ ರೈತ ಒಕ್ಕೂಟ
ಹಾಗೂ ಸದಸ್ಯರು, ಜಿಲ್ಲಾ ಕೃಷಿಕ ಸಮಾಜ, ದಾವಣಗೆರೆ.
**ಮತ್ತು ಕುಟುಂಬದವರು**

## ಚಿಕ್ಕತೊಗಲೇರಿ ಚಂದ್ರಮ್ಮ ನಿಧನ



ದಾವಣಗೆರೆ ತಾಲ್ಲೂಕು ಚಿಕ್ಕತೊಗಲೇರಿ ಗ್ರಾಮದ ವಾಸಿ ದಿ|| ಜಿ.ಬಿ. ಷಡಕಪ್ಪ ಇವರ ಧರ್ಮಪತ್ನಿ **ಶ್ರೀಮತಿ ಚಂದ್ರಮ್ಮ** ಅವರು ದಿನಾಂಕ 27.06.2021ರ ಭಾನುವಾರ ರಾತ್ರಿ 9.13 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.06.2021ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮ ಚಿಕ್ಕತೊಗಲೇರಿಯ ಮೃತರ ಜಮೀನಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**
ಮೊ. : 99025 11952, 97405 69157, 99643 78384

# ಡೆಲ್ಟಾ ಪ್ಲಸ್ ತೀವ್ರವೆಂದು ಕಂಡು ಬಂದಿಲ್ಲ : ಅರೋರ

ನವದೆಹಲಿ, ಜೂ. 27 - ಡೆಲ್ಟಾ ಪ್ಲಸ್ ಕೊರೊನಾ ರೂಪಾಂತರಿ ಶ್ವಾಸಕೋಶದ ಅಂಗಾಂಶಗಳಿಗೆ ಹೆಚ್ಚು ಅಂಟಿಕೊಳ್ಳುತ್ತಿದೆ. ಆದರೆ, ಇದರಿಂದ ಸೋಂಕು ತೀವ್ರತೆ ಹೆಚ್ಚಾಗುತ್ತದೆ, ಇಲ್ಲವೇ ಸೋಂಕು ವೇಗವಾಗಿ ಹರಡುತ್ತದೆ ಎಂದರ್ಥವಲ್ಲ ಎಂದು ಕೊರೊನಾ ವೈರಸ್ ಕುರಿತ ಸಮಿತಿಯಾದ ಎನ್.ಟಿ.ಎ.ಜಿ.ಐ. ಅಧ್ಯಕ್ಷ ಡಾ. ಎನ್.ಕೆ. ಅರೋರ ಹೇಳಿದ್ದಾರೆ.

ಡೆಲ್ಟಾ ಪ್ಲಸ್ ಕೊರೊನಾ ರೂಪಾಂತರಿಯನ್ನು ಜೂನ್ 11ರಂದು ಗುರುತಿಸಲಾಗಿದೆ. ಇದು ಕಳವಳ ಕಾರಿ ರೂಪಾಂತರಿ ಎಂದು ಪರಿಗಣಿಸಲಾಗಿದೆ. ಇದುವ ರೆಗೂ 12 ರಾಜ್ಯಗಳಲ್ಲಿ ಡೆಲ್ಟಾ ಪ್ಲಸ್ ಸೋಂಕು ಪತ್ತೆ ಯಾಗಿದೆ.

ಈ ಬಗ್ಗೆ ಮಾತನಾಡಿರುವ ಅರೋರ, ಇತರೆ ರೂಪಾಂತರಿಗಳಿಗೆ ಹೋಲಿಸಿದರೆ ಡೆಲ್ಟಾ ಪ್ಲಸ್ ಶ್ವಾಸ ಕೋಶಕ್ಕೆ ಹೆಚ್ಚು ಅಂಟಿಕೊಳ್ಳುತ್ತಿದೆ. ಆದರೆ, ಇದು ತೀವ್ರವಾಗಿ ಹರಡುತ್ತದೆ, ಇಲ್ಲವೇ ಹೆಚ್ಚು ತೀವ್ರ ರೋಗ ತರುತ್ತದೆ ಎಂದರ್ಥವಲ್ಲ ಎಂದಿದ್ದಾರೆ.

ಹೆಚ್ಚು ಪ್ರಕರಣಗಳನ್ನು ಗುರುತಿಸಿದ ನಂತರವಷ್ಟೇ ಡೆಲ್ಟಾ ಪ್ಲಸ್ ಸೋಂಕಿನ ಪರಿಣಾಮ ಅರ್ಥವಾಗಲಿದೆ. ಆದರೆ, ಒಂದು ಇಲ್ಲವೇ ಎರಡು ಡೋಸ್ ಲಸಿಕೆ ಪಡೆದವರ ಮೇಲೆ ಸೋಂಕಿನ ಪರಿಣಾಮ ಕಡಿಮೆ ಇರುವುದು ಕಂಡು ಬಂದಿದೆ ಎಂದವರು ತಿಳಿಸಿದ್ದಾರೆ. ನಾವು ಈ ಬಗ್ಗೆ ತೀವ್ರ ನಿಗಾ ವಹಿಸಿದ್ದೇವೆ. ಅಧ್ಯಯನದ ನಂತರವಷ್ಟೇ ಅದರ ಹರಡುವಿಕೆಯ ತೀವ್ರತೆ ಸ್ಪಷ್ಟವಾಗಲಿದೆ ಎಂದವರು ಹೇಳಿದ್ದಾರೆ. ಡೆಲ್ಟಾ ಪ್ಲಸ್ ಸೋಂಕು ಬಂದಿರುವ ಹಲವಾರು ಲಕ್ಷಣ ರಹಿತರಿರಬಹುದು. ಹೀಗಾಗಿ ಈ ರೂಪಾಂತರಿಯಿಂದ ಸೋಂಕಿತರ ಸಂಖ್ಯೆ ಹೆಚ್ಚಾಗಿರಬಹುದು ಎಂದವರು ಹೇಳಿದ್ದಾರೆ.

ಹಲವು ರಾಜ್ಯಗಳು ಈಗಾಗಲೇ ಸೋಂಕು ಹರಡುವಿಕೆ ತಡೆಯಲು ಜಿಲ್ಲಾ ಮಟ್ಟದಲ್ಲಿ ಯೋಜನೆಗಳನ್ನು ಜಾರಿಗೆ ತರುತ್ತಿವೆ. ಸೋಂಕು ಕಂಡು ಬಂದಿರುವ ಜಿಲ್ಲೆಗಳಲ್ಲಿ ಹೆಚ್ಚು ಲಸಿಕೆ ನೀಡಬೇಕಾಗಬಹುದು ಎಂದವರು ಹೇಳಿದ್ದಾರೆ.

ಡೆಲ್ಟಾ ಪ್ಲಸ್ ಕಾರಣದಿಂದಾಗಿ ಮೂರನೇ ಕೊರೊನಾ ಅಲೆ ಬರುತ್ತದೆಯೇ ಎಂದು ಹೇಳುವುದು ಕಷ್ಟ. ಎರಡನೇ ಅಲೆ ಕಳೆದ ಮೂರು ತಿಂಗಳಿಂದ ತೀವ್ರವಾಗಿದ್ದು, ಅದು ಈಗಲೂ ಮುಂದುವರೆಯುತ್ತಿದೆ. ಕಳೆದ 8-10 ದಿನಗಳಿಂದ ಪ್ರತಿದಿನ 50 ಸಾವಿರ ಸೋಂಕಿತರು ಕಂಡು ಬರುತ್ತಿದ್ದಾರೆ. ಕೆಲವೆಡೆ ಸೋಂಕು ಈಗಲೂ ತಗ್ಗಿಲ್ಲ ಎಂದು ಅರೋರ ಹೇಳಿದ್ದಾರೆ.

ಎರಡನೇ ಅಲೆಯಿಂದ ಜನರ ಸ್ಪಂದನೆ ಮೇಲೆ ಪರಿಣಾಮವಾಗಿದೆ. ಜನರು ಎರಡನೇ ಅಲೆಯಿಂದ ಹೇಗೆ ಪ್ರಭಾವಿತರಾಗಿದ್ದಾರೆ ಎಂಬುದರ ಮೂಲಕ 3ನೇ ಅಲೆ ನಿರ್ಧಾರವಾಗುತ್ತದೆ ಎಂದು ಅರೋರ ತಿಳಿಸಿದ್ದಾರೆ.

### ಲಸಿಕೆ ಪಡೆದವರ ಮೇಲೆ ತೀವ್ರತೆ ಕಡಿಮೆ

**ಈಗಾಗಲೇ ಸೋಂಕು ಬಂದಿದ್ದರೆ ಮೂರನೇ ಅಲೆ ಶೀತದಂತೆ ಕಡಿಮೆ ತೀವ್ರತೆ**

ದೊಡ್ಡ ಪ್ರಮಾಣದ ಜನರಿಗೆ ಎರಡನೇ ಅಲೆಯಲ್ಲಿ ಕೊರೊನಾ ಸೋಂಕು ಬಂದಿದ್ದರೆ, ಮೂರನೇ ಅಲೆಯಲ್ಲಿ ಮತ್ತೆ ಸೋಂಕು ಬಂದಾಗ ಅದು ಶೀತದಷ್ಟೇ ತೀವ್ರತೆ ಹೊಂದಿರುತ್ತದೆ. ಮೂರನೇ ಅಲೆಯಲ್ಲಿ ಗಂಭೀರ ಇಲ್ಲವೇ ಮಾರಣಾಂತಿಕ ಸೋಂಕು ಬರುವ ಸಾಧ್ಯತೆ ಇಲ್ಲ ಎಂದು ಎನ್.ಟಿ.ಎ.ಜಿ.ಐ. ಅಧ್ಯಕ್ಷ ಅರೋರ ಹೇಳಿದ್ದಾರೆ.

ಎರಡನೆಯದಾಗಿ, ಲಸಿಕೆ ಬಹಳ ಮುಖ್ಯ. ಒಂದು ಡೋಸ್ ಲಸಿಕೆ ಸಹ ಪರಿಣಾಮಕಾರಿಯಾಗಿರುವ ಕಾರಣ, ತ್ವರಿತವಾಗಿ ಲಸಿಕೆ ಕೊಡಬೇಕು. ತ್ವರಿತವಾಗಿ ಲಸಿಕೆ ನೀಡಿದರೆ ಮೂರನೇ ಅಲೆ ತೀವ್ರತೆ ಕಡಿಮೆಯಾಗುತ್ತದೆ. ಅಲ್ಲದೇ ಕೊರೊನಾ ತಡೆಗಾಗಿ ಜನರು ಸೂಕ್ತ ವರ್ತನೆ ತೋರಬೇಕಿದೆ. ಮೂರನೇ ಅಲೆ ಮೊದಲ ಎರಡು ಅಲೆಗಳಷ್ಟು ಪರಿಣಾಮ ಬೀರುವ ಸಾಧ್ಯತೆ ಇಲ್ಲ ಎಂದವರು ತಿಳಿಸಿದ್ದಾರೆ.



# ಹೋಟೆಲ್ ಉದ್ಯಮಕ್ಕೆ ಡಬಲ್ ಪೆಟ್ಟು

## ಲಾಕ್‌ಡೌನ್ ಹಾಗೂ ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿ ಹೋಟೆಲ್‌ಗಳು

ದಾವಣಗೆರೆ, ಜು.27- ಕೊರೊನಾದಿಂದ ಅತಿ ಹೆಚ್ಚು ಪೆಟ್ಟು ತಿಂದಿರುವ ಹೋಟೆಲ್ ಉದ್ಯಮಕ್ಕೆ ದರ ಏರಿಕೆಯ ಬಿಸಿ ಮತ್ತೊಂದು ಪೆಟ್ಟು ನೀಡಿದೆ.

ಕಳೆದ ವರ್ಷ ಲಾಕ್‌ಡೌನ್ ಪರಿಣಾಮ ಹೋಟೆಲ್ ಉದ್ಯಮ ಅತಿ ಹೆಚ್ಚು ನಷ್ಟ ಅನುಭವಿಸಿತ್ತು. ಇನ್ನೇನು ಚೇತರಿಕೆ ಕಾಣಬೇಕೆನ್ನುವಷ್ಟ ರಲ್ಲಿ ಕೋವಿಡ್ ಎರಡನೇ ಅಲೆ ಪೆಟ್ಟು ನೀಡಿತು.

ಇದೀಗ ಸೋಂಕು ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಬೆಳಿಗ್ಗೆ 6 ರಿಂದ ಸಂಜೆ 5ರವರೆಗೆ ಹೋಟೆಲ್ ಸೇವೆ ಒದಗಿಸಲು ಸರ್ಕಾರ ಅನುಮತಿ ನೀಡಿದೆ. ಆದರೆ ವಸ್ತುಗಳ ಬೆಲೆ ಏರಿಕೆ ಬಿಸಿ, ಹೋಟೆಲ್ ಮಾಲೀಕರನ್ನು ಕಾಡುತ್ತಿದೆ.

ಸೋಂಕು ಕಡಿಮೆಯಾಗಿದೆಯಾದರೂ ಜನರಲ್ಲಿ ಭಯ ಕಡಿಮೆಯಾಗಿಲ್ಲ. ಆದ್ದರಿಂದ ಸದ್ಯದ ಪರಿಸ್ಥಿತಿಯಲ್ಲಿ ಅಷ್ಟಾಗಿ ಜನರು ಹೋಟೆಲ್‌ಗಳಿಗೆ ಬರುವುದು ಕಡಿಮೆಯೇ. ಇನ್ನು ಅಡುಗೆ ಎಣ್ಣೆ ಸೇರಿದಂತೆ ಹೋಟೆಲ್‌ಗಳಲ್ಲಿ ಬಳಸುವ ಅಡುಗೆ ಪದಾರ್ಥಗಳ ಬೆಲೆ ಗಗನಕ್ಕೇರಿದೆ.ಹಳೆಯ ದರದಲ್ಲಿಯೇ ಸೇವೆ ನೀಡಿದರೆ ನಷ್ಟದಲ್ಲಿ ಹೋಟೆಲ್ ನಡೆಸಬೇಕಾಗುತ್ತದೆ. ದರ ಏರಿಸಿದರೆ ಬರುವ ಗ್ರಾಹಕರನ್ನೂ ಕಳೆದುಕೊಳ್ಳಬೇಕಾದೀತು ಎಂಬ ಭಯ ಮಾಲೀಕರದ್ದು.

ಹೋಟೆಲ್ ಉದ್ದಿಮೆ ಎದುರಿಸುತ್ತಿರುವ ಸಂಕಷ್ಟಗಳ ಬಗ್ಗೆ ಜನತಾವಾಣಿಯೊಂದಿಗೆ ಮಾತ ನಾಡಿದ ಹೋಟೆಲ್ ಉದ್ದಿಮೆದಾರರ ಸಂಘದ ಗೌರವಾಧ್ಯಕ್ಷ ಅಣಬೇರು ರಾಜಣ್ಣ ಅವರು, 1250 ರೂ.ಗಳಿಗೆ ಸಿಗುತ್ತಿದ್ದ 15 ಕೆ.ಜಿ. ಅಡುಗೆ ಎಣ್ಣೆಯ ಟಿನ್ ಬೆಲೆ ಈಗ 2700 ರೂ.ಗಳಷ್ಟಾಗಿದೆ. ಇದೊಂದು ಸ್ಯಾಂಪಲ್ ಅಷ್ಟೇ. ಡೀಸೆಲ್-ಪೆಟ್ರೋಲ್ ಬೆಲೆ ಏರಿಕೆಯಿಂದಾಗಿ ಎಲ್ಲಾ ಅಡುಗೆ ಪದಾರ್ಥಗಳ ಬೆಲೆಯೂ ಏರಿಕೆಯಾಗಿದೆ. ಈಗಾಗಲೇ ಕೊರೊನಾ ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿದ್ದ ಹೋಟೆಲ್ ಉದ್ದಿಮೆ. ಬೆಲೆ ಏರಿಕೆ ಬಿಸಿಯಿಂದ ಮತ್ತಷ್ಟು ನಲುಗಿದೆ ಎಂದರು.

ನಗರದಲ್ಲಿ 40ಕ್ಕೂ ಹೆಚ್ಚು ದೊಡ್ಡ ಹೋಟೆಲ್‌ಗಳಿವೆ. 150 ಸಾಮಾನ್ಯ ಹೋಟೆಲ್‌ಗಳಿದ್ದರೆ, 400-500 ಫುಟ್ ಪಾತ್ ಹೋಟೆಲ್‌ಗಳಿವೆ. ಫುಟ್ ಪಾತ್ ಹೋಟೆಲ್‌ಗಳಲ್ಲಿ ಕಾರ್ಮಿಕರು ಕಡಿಮೆ. ಆದರೆ ದೊಡ್ಡ ಹೋಟೆಲ್‌ಗಳಲ್ಲಿ 100ಕ್ಕೂ ಹೆಚ್ಚು ಕಾರ್ಮಿಕರಿರು ತ್ತಾರೆ. ಮೂರ್ನಾಲ್ಕು ತಿಂಗಳು ಯಾವುದೇ ಆದಾಯ ಇರದಿದ್ದರೂ ಕಾರ್ಮಿಕರಿಗೆಲ್ಲಾ ವೇತನ, ಪಿ.ಎಫ್., ಇ.ಎಸ್.ಐ. ಸೇರಿದಂತೆ ಸಾಮಾಜಿಕ ಭದ್ರತೆ ಜೊತೆಗೆ ಲಾಕ್ ಡೌನ್ ಅವಧಿಯಲ್ಲೂ ವೇತನ ನೀಡಬೇಕಾಗುತ್ತದೆ ಎಂದರು.

**ನೆರವಿಗೆ ಬಾರದ ಸರ್ಕಾರ:** ಸರ್ಕಾರ ಇದುವರೆಗೂ ಹೋಟೆಲ್ ಉದ್ದಿಮೆದಾರರ ನೆರವಿಗೆ ಧಾವಿಸಿಲ್ಲ. ಹೆಚ್ಚಾಗಿ ಅನಕ್ಷರಸ್ಥರೇ ಹೋಟೆಲ್ ಗಳಲ್ಲಿ ಕೆಲಸಕ್ಕೆ ಬರುತ್ತಾರೆ. ಅವರಿಗೆ ಬಟ್ಟೆ, ಊಟ, ವೇತನ ನೀಡುವ ಜೊತೆಗೆ ಅವರ ಕಷ್ಟಗಳಲ್ಲೂ ಭಾಗಿಯಾಗುವುದು ಮಾಲೀಕರೇ ಎಂದರು.

ಇಲ್ಲಿಯವರೆಗೆ ಹೋಟೆಲ್ ಗಳಿಂದ ಯಾರಿಗೂ ಸೋಂಕು ಹರಡಿದ ಉದಾಹರಣೆಗಳಿಲ್ಲ. ಇಷ್ಟು ದಿನವೂ ಸ್ವಚ್ಛತೆ, ರುಚಿಗೆ ಆದ್ಯತೆ ನೀಡುತ್ತಿದ್ದೇವೆ. ಮುಂದೆಯೂ ಆದ್ಯತೆ ನೀಡುತ್ತೇವೆ ಎಂದು ತಿಳಿಸಿದ್ದಾರೆ.

**ಜಿಲ್ಲಾಡಳಿತಕ್ಕೆ ಕೃತಜ್ಞತೆ:** ಕೊರೊನಾ ವೇಳೆ ರೈತರಿಂದಲೇ ಜನರು ಉಳಿದಿದ್ದಾರೆ ಎಂದು ಸ್ಮರಿಸಿದ ರಾಜಣ್ಣ, ಕಳೆದ ಹಲವಾರು ತಿಂಗಳುಗಳಿಂದ ತಮ್ಮ ಜೀವವನ್ನೇ ಪಣಕ್ಕಿಟ್ಟು ಕೊರೊನಾ ಸೋಂಕಿತರ ಸೇವೆಯಲ್ಲಿ ಭಾಗಿಯಾದ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ವೈದ್ಯರು, ನರ್ಸ್‌ಗಳು ಹಾಗೂ ಉಚಿತ ಲಸಿಕೆ ನೀಡುತ್ತಿರುವ ಶಾಮನೂರು ಶಿವಶಂಕರಪ್ಪ ಹಾಗೂ ಕುಟುಂಬ, ಹಾಸ್ಟೆಲ್‌ಗಳನ್ನು ಕೋವಿಡ್ ಕೇರ್ ಸೆಂಟರ್‌ಗಳನ್ನಾಗಿಸಲು ಹಾಗೂ ದಾನ-ಧರ್ಮಕ್ಕೆ ಮಾರ್ಗದರ್ಶನ ನೀಡಿದ ತರಳಬಾಳು ಜಗದ್ಗುರುಗಳಿಗೆ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

### ವಿದ್ಯುತ್ ಬಳಕೆ ಇಲ್ಲದಾಗ ಬಿಲ್ ಮನ್ನಾ ನಿರ್ಧಾರ



**ಸರ್ಕಾರ ಹೋಟೆಲ್, ರೆಸಾರ್ಟ್‌ಗಳ 3 ತಿಂಗಳ ವಿದ್ಯುತ್ ಬಿಲ್ ಮನ್ನಾ ಮಾಡುವುದಾಗಿ ಹೇಳಿದೆ. ಕಳೆದ ಮೂರು ತಿಂಗಳಿನಿಂದ ಹೋಟೆಲ್‌ಗಳು ಬಾಗಿಲು ತೆರೆದಿಲ್ಲ. ವಿದ್ಯುತ್ ಬಳಕೆ ಮಾಡಿಲ್ಲ. ಹೀಗಿದ್ದಾಗ ವಿದ್ಯುತ್ ಬಿಲ್ ಬರುವುದಾದರೂ ಎಷ್ಟು ? ಎಂದು ಹೋಟೆಲ್ ಉದ್ದಿಮೆದಾರರ ಸಂಘದ ಗೌರವಾಧ್ಯಕ್ಷ ಅಣಬೇರು ರಾಜಣ್ಣ ಪ್ರಶ್ನಿಸಿದ್ದಾರೆ.**

### ಜಿಲ್ಲಾಡಳಿತದಿಂದ ಲಸಿಕೆ ನೀಡಲಿ

**ಹೋಟೆಲ್ ಉದ್ಯಮದಲ್ಲಿರುವ ಪ್ರತಿಯೊಬ್ಬರಿಗೂ ಸರ್ಕಾರ ಲಸಿಕೆ ನೀಡಬೇಕು ಎಂದು ಒತ್ತಾಯಿಸಿರುವ ಅಣಬೇರು ರಾಜಣ್ಣ, ಹೋಟೆಲ್ ಕಾರ್ಮಿಕರು ಲಸಿಕೆ ಪಡೆದು ಆರೋಗ್ಯವಾಗಿದ್ದರೆ, ಗ್ರಾಹಕರ ಆರೋಗ್ಯವೂ ಸುರಕ್ಷಿತವಾಗಿರುತ್ತದೆ ಎಂದರು. ಲಸಿಕೆ ನೀಡುವ ಬಗ್ಗೆ ಶೀಘ್ರ ಜಿಲ್ಲಾಡಳಿತಕ್ಕೆ ಮನವಿ ಮಾಡುವುದಾಗಿ ಹೇಳಿದರು.**

### ಇಂದಿನಿಂದ ಸಂಜೆ 5 ರವರೆಗೆ ಹೋಟೆಲ್‌ಗಳು ಸೇವೆ ಒದಗಿಸಲು ಅವಕಾಶ

# 118 ಪಾಸಿಟಿವ್, 28 ಗುಣಮುಖ

ದಾವಣಗೆರೆ, ಜೂ.27- ಜಿಲ್ಲೆಯಲ್ಲಿ ಭಾನುವಾರ 118 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಇಬ್ಬರು ಮೃತಪಟ್ಟಿದ್ದಾರೆ. 28 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿ ಕಾರಿಗಳ ಪ್ರಕಟಣೆ ತಿಳಿಸಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 48, ಹರಿಹರ 5, ಜಗಳೂರು 8, ಚನ್ನಗಿರಿ 24, ಹೊನ್ನಾಳಿ 32 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 1335 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 533 ಜನರು ಮೃತಪಟ್ಟಿದ್ದಾರೆ.

# ಜಿಲ್ಲಾಡಳಿತದಿಂದ ಕೆಂಪೇಗೌಡ ಜಯಂತಿ



ದಾವಣಗೆರೆ, ಜೂ.27 - ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀ ಕೆಂಪೇಗೌಡ ಜಯಂತಿಯನ್ನು ಕೋವಿಡ್ ಹಿನ್ನೆಲೆಯಲ್ಲಿ ನಗರದ ಜಿಲ್ಲಾಡಳಿತ ಭವನದಲ್ಲಿ ಇಂದು ಸರಳವಾಗಿ ಆಚರಿಸಲಾಯಿತು.

ಜಿಲ್ಲಾ ಪಂಚಾಯತಿ ಸಿಇಒ ಡಾ.ವಿಜಯ ಮಹಾಂತೇಶ ದಾನಮ್ಮನವರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಜೆ. ನಾಗರಾಜ, ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಯಶೋಧ ಯೋಗೀಶ್, ಪತ್ರಕರ್ತ ಬಿ.ಎನ್. ಮಲ್ಲೇಶ್, ಎಂ.ಎಸ್. ರಾಮೇಗೌಡ, ಗೋಪಾಲಗೌಡ್ರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕನ್ನಡ ಭಾಷೆಗೆ ಧಕ್ಕೆಯಾದರೆ ಉಗ್ರ ಹೋರಾಟ



ದಾವಣಗೆರೆ, ಜೂ.27- ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕನ್ನಡ ಭಾಷೆಗೆ ಧಕ್ಕೆಯಾದರೆ, ಗೋಕಾಕ್ ಮಾದರಿಯ ಉಗ್ರ ಹೋರಾಟ ನಡೆಸಲಾಗುವುದು ಎಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರು ಸರ್ಕಾರವನ್ನು ಎಚ್ಚರಿಸಿದ್ದಾರೆ.

ಶಿಕ್ಷಣ ನೀತಿಗೆ ಸಂಬಂಧಿಸಿದ ಆಯೋಗದಲ್ಲಿರುವ ಅಂಶಗಳನ್ನು ಜಾರಿಗೊಳಿಸುವಾಗ, ದೇಶ ಮತ್ತು ರಾಜ್ಯಗಳಲ್ಲಿ ಶಿಕ್ಷಣ ಪದ್ಧತಿಯ ಕಾನೂನುಗಳನ್ನು ರೂಪಿಸುವಾಗ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗಿ ರಾಜ್ಯಗಳ ವಿಧಾನಸಭೆ ಮತ್ತು ಸಂಸತ್ತಿನಲ್ಲಿ ಅನುಮೋದನೆಗೊಂಡ ರಾಷ್ಟ್ರಪತಿ ಸಹಿ ಪಡೆದ ನಂತರ ನೂತನ ಶಿಕ್ಷಣ ನೀತಿ ಜಾರಿಯಾಗಬೇಕಾಗಿದೆ.

ಆದರೆ, ಯಾವುದೇ ಚರ್ಚೆಗಳು ನಡೆಯದೆ ಏಕಾಏಕಿ ಜಾರಿಗೊಳಿಸಲು ಸರ್ಕಾರ ಮುಂದಾಗಿರುವುದು ಅತ್ಯಂತ ದುರದೃಷ್ಟಕರವಾಗಿದೆ. ಕನ್ನಡ ಭಾಷೆಗೆ ಪದವಿಯಲ್ಲಿ ಆಗುವ ಅನ್ಯಾಯಕ್ಕೆ ಪ್ರತಿಯೊಬ್ಬ ಕನ್ನಡಿಗನೂ ಖಂಡಿಸುತ್ತಾನೆ ಎಂದು ವಾಮದೇವಪ್ಪ ತಿಳಿಸಿದ್ದಾರೆ.

# ಯೋಗ-ಪ್ರಕೃತಿ ಚಿಕಿತ್ಸೆಯಿಂದ ದೇಹ, ಮನಸ್ಸಿನ ಕಾಯಿಲೆ ದೂರ

ದಾವಣಗೆರೆ, ಜೂ.27-ಯೋಗವು ದೈಹಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಆಧ್ಯಾತ್ಮಿಕವಾಗಿ ಸಮತೋಲನದ ಸ್ಥಿತಿಗೆ ತರುವಂತದ್ದಾಗಿರುವುದರಿಂದ ಇಂದು ವಿಶ್ವಮಾನ್ಯವಾಗಿದೆ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ ಹೇಳಿದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ ಮತ್ತು ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ವತಿಯಿಂದ ಪ್ರಕೃತಿ ಚಿಕಿತ್ಸಾ ತಜ್ಞ ಡಾ. ಗಂಗಾಧರ್ ವರ್ಮ ಅವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ 7 ದಿನಗಳ ಆನ್‌ಲೈನ್ ಯೋಗ ತರಬೇತಿ ಶಿಬಿರದ ಮುಕ್ತಾಯ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಮಾತನಾಡಿದರು.

ಯೋಗ ಅಭ್ಯಾಸವು ಮನುಷ್ಯನ ಆತ್ಮವನ್ನು ಪರಮಾತ್ಮನೊಂದಿಗೆ ಸೇರಿಸುವ ಪ್ರಕ್ರಿಯೆಯೆಂದು ಕರೆಯಲಾಗಿದೆ. ಯೋಗದ ಎಲ್ಲ ಎಂಟು ಅಂಗಗಳು ಮನುಷ್ಯನ ಆರೋಗ್ಯ ಮತ್ತು ಜೀವನ ಕ್ರಮದ ಮೇಲೆ ಮಹತ್ತರ ಪರಿಣಾಮಗಳನ್ನು ಬೀರುತ್ತದೆ. ಈ ಅಭ್ಯಾಸಗಳು ಕೇವಲ ದೇಹವನ್ನು ಮಾತ್ರವಲ್ಲದೆ ಮನಸ್ಸನ್ನೂ ಕೂಡ ನಿಯಂತ್ರಣಕ್ಕೆ ತಂದುಕೊಳ್ಳುತ್ತದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ 'ಕಸ್ತೂರಿ' ಮಾಸ ಪತ್ರಿಕೆ ಪ್ರಧಾನ ಸಂಪಾದಕರಾದ ಶಾಂತಲಾ ಧರ್ಮರಾಜ್ ಮಾತ ನಾಡಿ, ತಾವು ಕಂಡಂತೆ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ವೃದ್ಧೆಯು ಯೋಗಾಭ್ಯಾಸವನ್ನು ಅಳವಡಿಸಿ ಕೊಳ್ಳುವ ಮೂಲಕ ಹತ್ತು ವರ್ಷಗಳಿಂದ ಯಾವುದೇ ನೋವಿಲ್ಲದೆ ಬದುಕು ಸಾಗಿಸುತ್ತಿರುವುದು ತಮಗೆ ಯೋಗ ಅರಿಯಲು ಪ್ರೇರಣೆಯಾಯಿತು ಎಂದರು.

ಅತಿಥಿಯಾಗಿ ಭಾಗವಹಿಸಿದ್ದ ಡಾ. ಶಿವಲಿಂಗಪ್ಪ ಮಾತನಾಡಿ, ಮೆಡಿಟೇಷನ್ ಥ್ಯಾನ್ ಮೆಡಿಕೇಶನ್ ಎನ್ನುವ ಸೂತ್ರವನ್ನು ಪಾಲಿಸಬೇಕೆಂದರು.

ಸೈಯದ್ ಅಹಮದ್, ಜಿಲ್ಲೆಯ ಆಯುಷ್ ಅಧಿಕಾರಿ ಡಾ. ಶಂಕರಗೌಡ, ಡಾ. ವಿಂಧ್ಯ ಗಂಗಾಧರ್ ವರ್ಮ, ಯೋಗದ ಮಹತ್ವ ಸಾರಿದರು.


ಕಾರ್ಯಕ್ರಮದ ರೂವಾರಿ ಡಾ. ಬಿ.ಆರ್. ಗಂಗಾಧರ್ ವರ್ಮ ಪ್ರತಿಯೊಬ್ಬರಲ್ಲೂ ಒಡಮೂಡುವ ಭಾವನೆಗಳ ಏರು-ಪೇರುಗಳನ್ನು ತಡೆಯಲು ಯೋಗಾಭ್ಯಾಸವು ಉಪಯುಕ್ತ ಎಂದು ಹೇಳುವ ಮೂಲಕ ಯೋಗದ ಮಹತ್ವವನ್ನು ವಿವರಿಸಿದರು.

ಡಾ. ರತ್ನ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಯೋಗ ಸಪ್ತಾಹದಲ್ಲಿ ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯರು

# ಬಾಪೂಜಿ ಎಂಬಿಎ ಕಾಲೇಜಿನಲ್ಲಿ ಯೋಗ ದಿನಾಚರಣೆ



ದಾವಣಗೆರೆ, ಜೂ.27- ನಗರದ ಬಾಪೂಜಿ ಎಂಬಿಎ ಕಾಲೇಜಿನಲ್ಲಿ ಪ್ರಥಮ ಎಂಬಿಎ ವಿದ್ಯಾರ್ಥಿನಿಯರಾದ ದಿವ್ಯ ಭಾರತಿ ಮತ್ತು ತಂಡ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ವಿವಿಧ ರೀತಿಯ ಆಸನಗಳನ್ನು ಆನ್‌ಲೈನ್‌ನಲ್ಲಿ ಮಾಡುವ ಮೂಲಕ ಯೋಗ ದಿನಾಚರಣೆಯನ್ನು ಆಚರಿಸಿದರು.

# ರೈತ ವಿರೋಧಿ ಶಾಸನಗಳ ರದ್ಧತಿಗಾಗಿ ಆಗ್ರಹಿಸಿ ಪ್ರತಿಭಟನೆ



### ಹರಪನಹಳ್ಳಿಯಲ್ಲಿ ರೈತ ಸಂಘಟನೆಗಳಿಂದ ಆಕ್ರೋಶ

ಹರಪನಹಳ್ಳಿ, ಜೂ.27 - ಕೃಷಿಯನ್ನು ಉಳಿಸಿ ಪ್ರಜಾಪ್ರಭುತ್ವವನ್ನು ರಕ್ಷಿಸಿ ರೈತ ವಿರೋಧಿ ಮೂರು ಶಾಸನಗಳ ರದ್ಧತಿಗೆ ಆಗ್ರಹಿಸಿ ಹಾಗೂ ರೈತರ ಬೆಳೆಗೆ ಕನಿಷ್ಠ ಬೆಂಬಲ ಬೆಲೆಗೆ ಒತ್ತಾಯಿಸಿ ತಾಲ್ಲೂಕಿನ ವಿವಿಧ ಪ್ರಗತಿಪರ ಸಂಘಟನೆಗಳು ಪ್ರತಿಭಟನೆ ಮಾಡಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಸಂಘಟನೆಯ ಮುಖಂಡ ಹೊಸಹಳ್ಳಿ ಮಲ್ಲೇಶ್ ಮಾತನಾಡಿ, ಈ ದೇಶದಲ್ಲಿ ರೈತರನ್ನು ಅನ್ನದಾತರು ಎಂದು ಕರೆಯುತ್ತಾರೆ. ಕಳೆದ 74 ದಿನಗಳಿಂದ ನಮ್ಮೆಲ್ಲಾ ಶ್ರಮದ ಮೂಲಕ ಹಾಗೂ ಇತರೆ ಎಲ್ಲ ರೀತಿಯ ಪ್ರಯತ್ನಗಳ ಮೂಲಕ ನಾವು ರೈತರಾಗಿ ನಮ್ಮ ಜವಾಬ್ದಾರಿಯನ್ನು ನಿಭಾಯಿಸಿಕೊಂಡು ಬಂದಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನಾವು ಸುಮಾರು 33 ಕೋಟಿ ಜನತೆಗೆ ಅನ್ನದಾತರಾಗಿದ್ದರೆ ಈಗ ಅದೇ ಭೂಮಿಯಲ್ಲಿ ಸುಮಾರು 140 ಕೋಟಿ ಜನತೆಗೆ ಅನ್ನದಾತರಾಗಿದ್ದೇವೆ. ಕೋವಿಡ್ ನಿಂದಾಗಿ ದೇಶದ ಎಲ್ಲಾ ಕ್ಷೇತ್ರಗಳು ಕೆಲಸ ನಿಲ್ಲಿಸಿರುವಾಗ ಅಥವಾ ಉತ್ಪಾದನೆಯಲ್ಲಿ ಇಳಿಮುಖ ತೋರಿಸುವಾಗ ರೈತರು ಮಾತ್ರ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಕೃಷಿಯಲ್ಲಿ ದಾಖಲೆ ಪ್ರಮಾಣದಲ್ಲಿ ಉತ್ಪಾದನೆ ಮಾಡಿದ್ದೇವೆ ಹಾಗೂ ಉಗ್ರಾಣಗಳನ್ನು ತುಂಬಿಸಿರುತ್ತೇವೆ. ದೇಶಕ್ಕೆ ನಮ್ಮಿಂದ ಏನೆಲ್ಲಾ ಸೇವೆಗಳನ್ನು ನೀಡಿದರೂ ಕೇಂದ್ರ ಸರ್ಕಾರವು ಕೃಷಿ ಕ್ಷೇತ್ರವನ್ನು ನಾಶ ಮಾಡಬಲ್ಲಂತಹ ಮೂರು ರೈತ ವಿರೋಧಿ ಕಾಯ್ದೆಗಳನ್ನು ನಮ್ಮ ಮೇಲೆ ಹೇರಿದೆ ಎಂದು ಕಿಡಿಕಾರಿದರು.

ಮುಖಂಡ ಗುಡಿಹಳ್ಳಿ ಹಾಲೇಶ್ ಮಾತನಾಡಿ, ನಾವು ಸರ್ಕಾರದಿಂದ ಯಾವುದೇ ದಾನವನ್ನು ಕೇಳುತ್ತಿಲ್ಲ. ನಮ್ಮ ಪರಿಶ್ರಮ ಹಾಗೂ ಕೆಲಸಕ್ಕೆ ತಕ್ಕದಾದ ಬೆಲೆಯನ್ನು ಕೇಳುತ್ತಿದ್ದೇವೆ. ನಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದಾಗ ನಾವು ಮೋಸ, ದರೋಡೆ ಹಾಗೂ ಶೋಷಣೆಗೆ ಒಳಗಾಗುತ್ತಿದ್ದೇವೆ. ಸದಾ ಸಾಲದಲ್ಲೇ ಜೀವಿಸುತ್ತಿರುವ ನಾವು ಕಳೆದ 30 ವರ್ಷಗಳಲ್ಲಿ ನಾಲ್ಕು ಲಕ್ಷಕ್ಕಿಂತ ಹೆಚ್ಚು ಮಂದಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಕನಿಷ್ಠ ಬೆಂಬಲ ಬೆಲೆಗಾಗಿ ಆಗ್ರಹಿಸುತ್ತಿದ್ದು ಶೀಘ್ರದಲ್ಲೇ ಸ್ವಾಮಿನಾಥನ್ ವರದಿ ಜಾರಿಯಾಗಬೇಕೆಂದು ಒತ್ತಾಯಿಸಿದರು.

ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರಾದ ಇದ್ಲಿ ರಾಮಪ್ಪ, ಕೊಟ್ರೇಶ್ ಬಳಿಗಾನೂರು, ಸಂದೇರ ಪರಶುರಾಮ, ಹುಲಿಕಟ್ಟಿ ರಾಜಪ್ಪ ರಹಮತ್‌ವುಲ್ಲಾ, ಮತ್ತಿಹಳ್ಳಿ ತಿಂದಪ್ಪ, ಬಳಿಗಾನೂರು ಮಲ್ಲೇಶ್, ವೀರಯ್ಯ, ಬಸವರಾಜ ಹಾಗೂ ರಾಜಶೇಖರ ಸೇರಿದಂತೆ ಇತರರು ಪ್ರತಿಭಟನೆಯಲ್ಲಿದ್ದರು.

# ಎಸ್ಸೆಸ್ ಜನ್ಮ ದಿನಾಚರಣೆ : ರಕ್ತದಾನ ಹಬ್ಬ



ದಾವಣಗೆರೆ, ಜೂ.27- ನಗರದ ಜಜಮು ವೈದ್ಯಕೀಯ ಮಹಾವಿದ್ಯಾಲಯದ ಚೇರ್ಮನ್ ಡಾ॥ ಶಾಮನೂರು ಶಿವಶಂಕರಪ್ಪ ಅವರ 91 ನೇ ಹುಟ್ಟುಹಬ್ಬದ ಪ್ರಯುಕ್ತ ರಕ್ತದಾನ ಶಿಬಿರವನ್ನು ಜಜಮು ವೈದ್ಯಕೀಯ ಕಾಲೇಜಿನ ರಕ್ತ ಭಂಡಾರದಲ್ಲಿ ನಡೆಸಲಾಯಿತು. ಶಿಬಿರದಲ್ಲಿ ಪಾಲ್ಗೊಂಡಿದ್ದ ಎಸ್ಸೆಸ್, ರಕ್ತದಾನ ಮಾಡಿದ ರಕ್ತದಾನಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ॥ ಎಸ್.ಬಿ.ಮುರುಗೇಶ್, ಬಾಪೂಜಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ॥ ಕುಮಾರ್, ರಕ್ತ ಭಂಡಾರದ ವೈದ್ಯಾಧಿಕಾರಿ ಡಾ॥ ಜಗದೀಶ್ವರಿ, ಡಾ॥ ನಿಕೇತನ್ ಬಾತಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ರಕ್ತದಾನ ಮಾಡಿದ ಕರೇಶಿವಪ್ಪ, ಶಾಂತಕುಮಾರ್, ಆರ್.ಎಸ್.ಮನುಕುಮಾರ್, ವಿದ್ಯಾರ್ಥಿ ಫನಿ ಕೃಷ್ಣ, ಆರ್.ಎನ್. ಮಂಜುನಾಥ, ಡಾ॥ ಧನಂಜಯ್ ಅವರುಗಳಿಗೆ ಎಸ್ಸೆಸ್ ನೆನಪಿನ ಕಾಣಿಕೆ ಹಾಗೂ ಪ್ರಮಾಣ ಪತ್ರವನ್ನು ವಿತರಿಸಿದರು.

# ಹರಿಹರ ತಾ.ನಲ್ಲಿ 541 ಟೆಸ್ಟ್, 1 ದೃಢ

ಮಲೇಬೆನ್ನೂರು, ಜೂ.27- ಭಾನುವಾರ ಹರಿಹರ ತಾಲ್ಲೂಕಿನಲ್ಲಿ 541 ಕೋವಿಡ್ ಟೆಸ್ಟ್‌ಗಳಾಗಿದ್ದು, ಈ ಪೈಕಿ 298 ಆರ್‌ಟಿಪಿಸಿಆರ್ ಮತ್ತು 243 ರ್‍ಯಾಪಿಡ್ ಟೆಸ್ಟ್‌ಗಳನ್ನು ಮಾಡಲಾಗಿದೆ.

243 ರ್‍ಯಾಪಿಡ್ ಟೆಸ್ಟ್‌ನಲ್ಲಿ ಒಬ್ಬರಿಗೆ ಮಾತ್ರ ಸೋಂಕು ದೃಢಪಟ್ಟಿದೆ. ಬೆಳಗಿನ ವರದಿಯಲ್ಲಿ ಆರ್‌ಟಿಪಿಸಿಆರ್ ಟೆಸ್ಟ್‌ನಲ್ಲಿ ಒಬ್ಬರಿಗೆ ಪಾಸಿಟಿವ್ ಬಂದಿದೆ.

ಹರಿಹರ ತಾಲ್ಲೂಕಿನಲ್ಲಿ ಕೋವಿಡ್ 2ನೇ ಅಲೆ ಬಹುತೇಕ ನಿಯಂತ್ರಣಕ್ಕೆ ಬಂದಿದೆ. ಸೋಂಕಿತರ ಸಂಖ್ಯೆ ಭಾನುವಾರ 2 ಕ್ಕೆ ಇಳಿಕೆ ಕಂಡಿರುವುದು ಎಲ್ಲರೂ ನಿಟ್ಟುಸಿರು ಬಿಡುವಂತಾಗಿದೆ.

**110 ಜನರಿಗೆ ಲಸಿಕೆ :** ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ, ಡಾ. ನಿಸಾರ್, ಸಿಬ್ಬಂದಿಗಳಾದ ರಾಜು, ಶ್ರೀರಾಮುಲು, ಶೈಲಜಾ, ಶ್ವೇತ ಅವರು ಭಾನುವಾರವೂ ಕರ್ತವ್ಯ ನಿರ್ವಹಿಸಿ 110 ಜನರಿಗೆ ಕೋವಿಶೀಲ್ಡ್ ಪ್ರಥಮ ಡೋಸ್ ಲಸಿಕೆ ಹಾಕಿದರು.

# ಆನ್‌ಲೈನ್ ಮಾರಾಟ : ಕೇಂದ್ರದ ನೂತನ ನಿಯಮಗಳಿಗೆ ಆಕ್ಷೇಪ

### ಸಣ್ಣ ಉದ್ಯಮಗಳಿಗೆ ಹಾನಿಯಾಗುತ್ತದೆ ಎಂದು ಬಿಜೆಪಿಯೇತರ ರಾಜ್ಯಗಳ ಕಳವಳ

ನವದೆಹಲಿ, ಜೂ. 27 - ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯ ಆನ್‌ಲೈನ್ ಮಾರಾಟ ಸಂಸ್ಥೆಗಳಿಗೆ ಪ್ರಸ್ತಾಪಿಸಿರುವ ನೂತನ ನಿಯಮಗಳಿಗೆ ಹಲವಾರು ರಾಜ್ಯಗಳು ಆಕ್ಷೇಪಿಸಿವೆ. ಆಕ್ಷೇಪಿಸಿರುವ ರಾಜ್ಯಗಳಲ್ಲಿ ಬಹುತೇಕ ಬಿಜೆಪಿಯೇತರ ಪಕ್ಷದ ಆಡಳಿತ ಇರುವ ರಾಜ್ಯಗಳಾಗಿವೆ.

ಪ್ರಸ್ತಾಪಿತ ನಿಯಮಗಳಿಂದ ಆನ್‌ಲೈನ್ ಮಾರಾಟ ಸಂಸ್ಥೆಗಳನ್ನು ಅವಲಂಬಿಸಿರುವ ಸಣ್ಣ ಉದ್ಯಮಗಳ ಮೇಲೆ ಪರಿಣಾಮವಾಗುತ್ತದೆ ಎಂಬ ಆಕ್ಷೇಪ ವ್ಯಕ್ತವಾಗುತ್ತಿದೆ.

ಗ್ರಾಹಕರ ರಕ್ಷಣೆ (ಇ-ವಾಣಿಜ್ಯ) ನಿಯಮ, 2020 ಕಾರಣದಿಂದಾಗಿ ಆರ್ಥಿಕ ಬೆಳವಣಿಗೆ ಹಾಗೂ ತೆರಿಗೆ ಸಂಗ್ರಹದ ಮೇಲೆ ಪರಿಣಾಮವಾಗಬಾರದು ಎಂದು ಹಲವಾರು ಸಲಹೆಗಳನ್ನು ನೀಡಲು ಈ ರಾಜ್ಯಗಳು ನಿರ್ಧರಿಸಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆದರೆ, ಈ ನಿಯಮಗಳಿಗೆ ಬದಲಾವಣೆ ತಂದರೂ, ಗ್ರಾಹಕರಿಗೆ ಲಭ್ಯವಾಗುವ ರಕ್ಷಣೆಯ ಮೇಲೆ ಯಾವುದೇ ಪರಿಣಾಮವಾಗದಂತಹ ಸಲಹೆಗಳು ಇರಲಿವೆ ಎಂದು ರಾಜ್ಯಗಳ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯೋಗ, ಸಣ್ಣ ಉದ್ಯಮಗಳು ಹಾಗೂ ಲಕ್ಷಾಂತರ ಸ್ವ ಉದ್ಯೋಗಿಗಳು, ಕಲಾವಿದರು ಮತ್ತಿತರರಿಗೆ ಧಕ್ಕೆಯಾಗದ ರೀತಿಯಲ್ಲಿ ಗ್ರಾಹಕರ ಹಿತ ರಕ್ಷಿಸಬೇಕಿದೆ ಎಂದು ರಾಜ್ಯಗಳು ಹೇಳುತ್ತಿವೆ.

ಜುಲೈ 6ರ ಒಳಗೆ ಪ್ರಸ್ತಾಪಿತ ನಿಯಮಗಳಿಗೆ ತಿದ್ದುಪಡಿಗಳ ಸಲಹೆ ನೀಡುವಂತೆ ಕೇಂದ್ರ ಸರ್ಕಾರ ಆಹ್ವಾನಿಸಿದೆ. ಇಷ್ಟರೊಳಗೆ ರಾಜ್ಯಗಳು ಸಲಹೆ ನೀಡಲಿವೆ.

ಆನ್‌ಲೈನ್ ಮಾರಾಟಗಾರರ ಮೇಲೆ ಹೆಚ್ಚಿನ ಜವಾಬ್ದಾರಿ ಹೊರಿಸಲು ನೂತನ ನಿಯಮಗಳು ಉದ್ದೇಶಿಸಿವೆ. ಇದರಿಂದ ಆನ್‌ಲೈನ್ ಮಾರಾಟ ಸಂಸ್ಥೆಗಳು ಬಂಡವಾಳ ಸಂಗ್ರಹಿಸುವುದಕ್ಕೆ ಅಡ್ಡಿಯಾಗಲಿದೆ ಎಂಬ ಕಳವಳ ವ್ಯಕ್ತವಾಗುತ್ತಿದೆ.

ಪ್ರಸ್ತಾಪಿತ ನಿಯಮಗಳಿಂದ ರಾಜ್ಯಗಳ ವಾಣಿಜ್ಯ ವ್ಯವಸ್ಥೆ ಮೇಲೆ ಪರಿಣಾಮವಾಗಬಹುದು. ವಿಶೇಷವಾಗಿ ಸಣ್ಣ ಉದ್ಯಮಗಳು ಗ್ರಾಹಕರನ್ನು ಕಳೆದುಕೊಳ್ಳಬಹುದು ಎಂದು ರಾಜ್ಯಗಳು ಹೇಳುತ್ತಿವೆ.

ಅಮೆಜಾನ್ ಹಾಗೂ ಫ್ಲಿಪ್‌ಕಾರ್ಟ್ ಆನ್‌ಲೈನ್ ಮಾರಾಟ ತಾಣಗಳಲ್ಲಿ ಮೂರನೇ ಎರಡರಷ್ಟು ಆದಾಯ ಸಣ್ಣ ಉದ್ಯಮಗಳಿಂದ ಬರುತ್ತಿದೆ. ಇದರಲ್ಲಿ ದೊಡ್ಡ ಮಾರಾಟ ಜಾಲವೇ ಇದೆ. ಈ ವೇದಿಕೆಗಳು ಇತ್ತೀಚಿನ ವರ್ಷಗಳಲ್ಲಿ ಲಕ್ಷಾಂತರ ಜನರಿಗೆ ಉದ್ಯೋಗ ಕಲ್ಪಿಸಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಸ್ತಾಪಿತ ನಿಯಮಗಳಲ್ಲಿ ವಂಚನಾತ್ಮಕವಾಗಿ ಕ್ಷಿಪ್ರ ಮಾರಾಟ ಮಾಡುವುದು ಹಾಗೂ ತಪ್ಪು ದಾರಿಗೆಳೆಯುವ ವಸ್ತುಗಳ ಮಾರಾಟ ಮತ್ತು ಸೇವೆಗಳ ಮೇಲೆ ನಿಷೇಧ ಹೇರಲಾಗಿದೆ. ಸರಕುಗಳನ್ನು ಶೋಧಿಸುವಾಗ ತಪ್ಪು ದಾರಿಗೆಳೆಯುವ ಉತ್ಪನ್ನಗಳನ್ನು ತೋರಿಸದಂತೆಯೂ ತಿಳಿಸಲಾಗಿದೆ.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಕೇಂದ್ರ ಸಚಿವಾಲಯ, ಸಾಂಪ್ರದಾಯಿಕವಾಗಿ ಆನ್‌ಲೈನ್ ತಾಣಗಳು ನಡೆಸುವ ಕ್ಷಿಪ್ರ ಮಾರಾಟವನ್ನು ನಿಷೇಧಿಸಿಲ್ಲ. ಗ್ರಾಹಕರ ಆಯ್ಕೆಗಳನ್ನು ಮಾರಾಟಕ್ಕೆ ನಿರ್ಬಂಧಿಸಲಾಗಿದೆ ಎಂದು ಹೇಳಿದೆ.

## ಭರಮಸಾಗರಕ್ಕೆ ಡಿ.ಹೆಚ್.ಓ ಡಾ. ರಂಗನಾಥ್ ಭೇಟಿ




ಭರಮಸಾಗರ, ಜೂ.27 - ಚಿತ್ರದುರ್ಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿ ಮೊನ್ನೆ ಅಧಿಕಾರ ವಹಿಸಿಕೊಂಡಿರುವ ಡಾ. ಆರ್. ರಂಗನಾಥ್ ಅವರು ಭರಮಸಾಗರದ ಸರ್ಕಾರಿ ಆಸ್ಪತ್ರೆಗೆ ನಿನ್ನೆ ಭೇಟಿ ನೀಡಿ ಎಲ್ಲಾ ವಿಭಾಗಗಳನ್ನು ವೀಕ್ಷಿಸಿದರು. ವೈದ್ಯಾಧಿಕಾರಿಗಳಿಗೆ ಸ್ವಚ್ಛತೆ ಕಾಪಾಡುವಂತೆ ಹಾಗೂ ಯಾವುದೇ ಕೊರತೆಯಿದ್ದರೂ ಪೂರೈಸುವುದಾಗಿ ತಿಳಿಸಿದರು.

ನಂತರ ರಂಗನಾಥ್ ಅವರು ಜಿ.ಪಂ.ಸದಸ್ಯ ಡಿ.ವಿ. ಶರಣಪ್ಪ, ಜಿ.ಪಂ ಮಾಜಿ ಉಪಾಧ್ಯಕ್ಷ ಹೆಚ್.ಎನ್ ತಿಪ್ಪೇಸ್ವಾಮಿ, ಹಿರಿಯ ಪತ್ರಕರ್ತ ಬಿ.ಜೆ. ಅನಂತಪದ್ಮನಾಭ ರಾವ್, ವಿ.ಎಸ್.ಎಸ್. ಅಧ್ಯಕ್ಷ ಟಿ.ಆರ್. ಚನ್ನೇಶ್ ಅವರ ಮನೆಗೆ ಭೇಟಿ ನೀಡಿದ್ದರು.


ನೂತನ ಡಿ.ಹೆಚ್.ಓ. ಡಾ. ರಂಗನಾಥ್ ಅವರು ಈ ಹಿಂದೆ ಭರಮಸಾಗರದ ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

## ಆರ್ಯವೈಶ್ಯದಿಂದ ರೆಡ್‌ಕ್ರಾಸ್‌ಗೆ ದೇಣಿಗೆ



ದಾವಣಗೆರೆ, ಜೂ.27- ನಗರದ ರೆಡ್ ಕ್ರಾಸ್ ಸಂಸ್ಥೆಗೆ ಆರ್ಯವೈಶ್ಯ ಅಧಿಕಾರಿಗಳ ಹಾಗೂ ವೃತ್ತಿನಿರತರ ಸಂಘದಿಂದ 5,000 ರೂ.ಗಳ ಚೆಕ್ಕನ್ನು ಸಲ್ಲಿಸಲಾಯಿತು. ಆವೋಪಾ ಅಧ್ಯಕ್ಷ ಡಾ. ಜಗನ್ನಾಥ್ ಕುಮಾರ್, ಪ್ರಧಾನ ಕಾರ್ಯದರ್ಶಿ ನಾಗರಾಜ ಗುಪ್ತ, ಸಂಘಟನಾ ಕಾರ್ಯದರ್ಶಿ ಮಧುಸೂದನ್, ನಿರ್ದೇಶಕ ಮಲ್ಲಿಕಾರ್ಜುನ್ ಅವರುಗಳು ರೆಡ್ ಕ್ರಾಸ್ ಅಧ್ಯಕ್ಷ ಡಾ. ಎ.ಎಂ. ಶಿವಕುಮಾರ್ ಅವರಿಗೆ ಚೆಕ್ ನೀಡಿದರು.

## ಮಾಜಿ ಸಚಿವ ತುಕಾರಾಮ್‌ಗೆ ಸನ್ಮಾನ



ಹರಪನಹಳ್ಳಿ, ಜೂ.27 - ಮಾಜಿ ಸಚಿವರೂ ಆದ ಸಂಡೂರು ಶಾಸಕ ಇ.ತುಕರಾಮ್ ಅವರು ಖಾಸಗಿ ಕಾರ್ಯಕ್ರಮದ ನಿಮಿತ್ತ ಪಟ್ಟಣದ ತೆಗ್ಗಿನ

**ಹರಪನಹಳ್ಳಿ**

ಮಠಕ್ಕೆ ಇಂದು ಭೇಟಿ ನೀಡಿದ್ದರು. ಈ ವೇಳೆ ತೆಗ್ಗಿನ ಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರು ಶಾಸಕ ತುಕಾರಾಮ್ ಅವರನ್ನು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ತೆಗ್ಗಿನಮಠ ಸಂಸ್ಥೆಯ ಕಾರ್ಯದರ್ಶಿ ಟಿ.ಎಂ. ಚಂದ್ರಶೇಖರಯ್ಯ, ವಕೀಲ ಟಿ.ವೆಂಕಟೇಶ, ಮುಖಂಡರಾದ ಇರ್ಫಾನ್ ಮುದುಗಲ್, ತೆಲಿಗಿ ಟಿ.ಉಮಾಕಾಂತ್, ಟಿ.ಮಂಜುನಾಥ, ಮಹಾಂತೇಶ್ ನಾಯ್ಕ್, ಜಿಸಾನ್, ಎಂ.ದಾದಾಪೀರ್ ಸೇರಿದಂತೆ ಇತರರು ಇದ್ದರು.

## 9 ಹುಲ್ಲಿನ ಬಣವೆ ಬೆಂಕಿಗಾಹುತಿ

ದಾವಣಗೆರೆ, ಜೂ.27- ಆವರಗೆರೆ ಸಮೀಪದ ಬಸವನಗೌಡ ಬಡಾವಣೆಯ ಕ್ಯಾಂಪ್ ಬಳಿ ನಿನ್ನೆ ತಡರಾತ್ರಿ ಅಗ್ನಿ ದುರಂತ ಸಂಭವಿಸಿದ್ದು, 9 ಜನರಿಗೆ ಸೇರಿದ ಹುಲ್ಲಿನ ಬಣವೆಗಳು ಸುಟ್ಟು ಭಸ್ಮವಾಗಿವೆ.

ಸತತ 8 ಗಂಟೆಗಳ ಕಾರ್ಯಾಚರಣೆ ನಡೆಸಿ ಅಗ್ನಿಯನ್ನು ನಂದಿಸಲಾಗಿದೆ. 6 ಅಗ್ನಿಶಾಮಕ ವಾಹನಗಳು ಈ ಕಾರ್ಯಾಚರಣೆಯಲ್ಲಿ ಇದ್ದು, 30ಕ್ಕೂ ಹೆಚ್ಚು ಸಿಬ್ಬಂದಿಗಳು ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದರು. ಆರ್‌ಎಫ್‌ಓ ಜಯರಾಂ ನೇತೃತ್ವ ವಹಿಸಿದ್ದರು ಎಂದು ಅಗ್ನಿಶಾಮಕ ದಳದ ಅಧಿಕಾರಿ ಬಸವಪ್ರಭು ಶರ್ಮಾ ತಿಳಿಸಿದ್ದಾರೆ.

# ಲಸಿಕೆ ಕುರಿತ ಗಾಳಿಸುದ್ದಿ ದೂರ ಮಾಡಿ

**ಶೀಘ್ರ ಲಸಿಕೆ ಪಡೆಯಲು ಪ್ರಧಾನಿ ಕಿವಿಮಾತು**

ನವದೆಹಲಿ, ಜೂ. 27 - ಕೊರೊನಾ ವೈರಸ್ ಅಪಾಯದ ಬಗ್ಗೆ ಜನರಿಗೆ ಎಚ್ಚರಿಕೆ ನೀಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಲಸಿಕೆ ಕುರಿತ ಹಿಂಜರಿಕೆ ಕೈ ಬಿಡಬೇಕು ಹಾಗೂ ಶೀಘ್ರ ಲಸಿಕೆ ಪಡೆಯಬೇಕು ಎಂದು ಕಿವಿಮಾತು ಹೇಳಿದ್ದಾರೆ.

ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿರುವ ಅವರು, ಮಧ್ಯಪ್ರದೇಶದ ಬೇತುಲ್ ಜಿಲ್ಲೆಯ ದುಲಾರಿಯ ಹಳ್ಳಿಗಳ ಕೆಲವರ ಜೊತೆ ಲಸಿಕೆ ಕುರಿತು ಇರುವ ಭೀತಿಯನ್ನು ನಿವಾರಿಸುವ ಕುರಿತು ಚರ್ಚಿಸಿದರು.

ನಾನು ಹಾಗೂ ನನ್ನ ನೂರು ವರ್ಷದ ತಾಯಿ ಇಬ್ಬರೂ ಲಸಿಕೆ ಪಡೆದಿದ್ದೇವೆ. ಜನರು ವಿಜ್ಞಾನ ಹಾಗೂ ವಿಜ್ಞಾನಿಗಳ ಮೇಲೆ ನಂಬಿಕೆ ಇರಿಸಬೇಕು ಹಾಗೂ ಗಾಳಿ ಸುದ್ದಿಗಳನ್ನು ದೂರ ಮಾಡಬೇಕು ಎಂದು ಪ್ರಧಾನಿ ಹೇಳಿದ್ದಾರೆ.

ಕೊರೊನಾ ಹೊರಟು ಹೋಗಿದೆ ಎಂದು ಕೆಲವರು ಹೇಳಿದ್ದಾರೆ. ಅಂತಹ ತಪ್ಪು ಕಲ್ಪನೆ ಬೇಡ. ಕೊರೊನಾ ರೂಪಾಂತರಿಯಾಗಿ ಹೊಸ ರೂಪದಲ್ಲಿ ಬರಬಹುದು ಎಂದವರು ಎಚ್ಚರಿಸಿದ್ದಾರೆ.

ಕೊರೊನಾ ತಡೆಗಾಗಿ ಮಾಸ್ಕ್ ಧರಿಸುವುದು, ಕೈ ತೊಳೆಯುವುದು ಹಾಗೂ ಸಾಮಾಜಿಕ ಅಂತರದಂತಹ ಶಿಷ್ಟಾಚಾರ ಪಾಲಿಸಬೇಕು. ಲಸಿಕೆ ಪಡೆಯುವುದು ಕೊರೊನಾಗೆ ಉತ್ತಮ ತಡೆಯಾಗಿದೆ ಎಂದವರು ಹೇಳಿದ್ದಾರೆ.

ಜೂನ್ 21ರಂದು ಒಂದೇ ದಿನ 86 ಲಕ್ಷ ಜನರಿಗೆ ಲಸಿಕೆ ನೀಡಿದ್ದನ್ನು ಪ್ರಶಂಸಿಸಿದ ಅವರು, ನೂತನ ನೀತಿಯ ಅನ್ವಯ ಎಲ್ಲಾ ವಯಸ್ಕರಿಗೆ ಉಚಿತ ಲಸಿಕೆ ನೀಡಲಾಗುವುದು. ಇದುವರೆಗೂ 31 ಕೋಟಿ ಜನರು ಲಸಿಕೆ ಪಡೆದಿದ್ದಾರೆ ಎಂದು ಮೋದಿ ತಿಳಿಸಿದ್ದಾರೆ.

ಇತ್ತೀಚೆಗೆ ಕೊರೊನಾದಿಂದ ಸಾವನ್ನಪ್ಪಿದ ಕೇಂದ್ರ ಸರ್ಕಾರದ ಕಾರ್ಯದರ್ಶಿ ಗುರು ಪ್ರಸಾದ್ ಮೊಹಾಪಾತ್ರ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಪ್ರಧಾನಿ, ಮೊಹಾಪಾತ್ರ ಅವರು ಆಕ್ಸಿಜನ್ ಉತ್ಪಾದನೆ ಹಾಗೂ ಪೂರೈಕೆ ಹೆಚ್ಚಿಸಲು ಅವಿರತ ಶ್ರಮಿಸಿದ್ದರು ಎಂದಿದ್ದಾರೆ.

## ಕೃಷಿ ಕುಂದು-ಕೊರತೆಗಳ ಸಭೆ



ದಾವಣಗೆರೆ, ಜೂ.27- ರೈತರ ಮತ್ತು ಕೃಷಿ ಕುಂದು-ಕೊರತೆಗಳ ಅಧ್ಯಯನ ಸಮಿತಿಯ ಸಭೆ, ಮಾಜಿ ಸಚಿವ ಕೃಷ್ಣ ಭೈರೇಗೌಡ ಅವರ ನೇತೃತ್ವದಲ್ಲಿ ಝೂಮ್ ಆನ್‌ಲೈನ್ ಮೀಟಿಂಗ್‌ನಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಭಾಗವಹಿಸಿ, ಜಿಲ್ಲೆಯ ರೈತರ ಸಮಸ್ಯೆ ಮತ್ತು ರೈತರಿಗೆ ಬರಬೇಕಾದ ಬೆಂಬಲ ಬೆಲೆ ಇನ್ನಿತರೆ ಸಮಸ್ಯೆಗಳ ಬಗ್ಗೆ ಗಮನ ಸೆಳೆದದರು. ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್, ಉತ್ತರ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾಗಾನಹಳ್ಳಿ ಪರಶುರಾಮ್, ಸಾಮಾಜಿಕ ಜಾಲತಾಣದ ಕೆ.ಎಲ್.ಹರೀಶ್ ಬಸಾಪುರ, ಕಾಡಜ್ಜಿ ಚಂದ್ರಣ್ಣ ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ಜೂಜು 42 ಸಾವಿರ ರೂ. ನಗದು ವಶ


ದಾವಣಗೆರೆ, ಜೂ.27- ಜೂಜು ಅಡ್ಡೆ ಮೇಲೆ ದಾಳಿ ನಡೆಸಿರುವ ಇಲ್ಲಿನ ಸಿಇಎನ್ ಅಪರಾಧ ಪೊಲೀಸರು 10 ಮಂದಿಯನ್ನು ಬಂಧಿಸಿ, ಒಟ್ಟು 42,350 ರೂ. ನಗದು ಸಹಿತ 5 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಮಲೇಬೆನ್ನೂರು ಪಟ್ಟಣದ ಇಂದಿರಾ ನಗರದ ರೇವಣ್ಣಸಿದ್ದಪ್ಪ ಅವರ ಬಿಲ್ಡಿಂಗ್‌ನ 2ನೇ ಮಹಡಿಯಲ್ಲಿ ರೂಮಿನೊಳಗೆ ಅಂದರ್ ಬಾಹರ್ ಇಸ್ಪಿಟ್ ಜೂಜಾಟದ ವೇಳೆ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ವಿ. ಗಿರೀಶ್ ಮತ್ತು ಸಿಬ್ಬಂದಿಗಳು ದಾಳಿ ಮಾಡಿದ್ದಾರೆ.

## ಕೂಡ್ಲಿಗಿ : ಇಂದು ಶಾಸಕರಿಂದ ಕಾಮಗಾರಿಗಳಿಗೆ ಅಡಿಗಲ್ಲು

ವಿಜಯನಗರ ಜಿಲ್ಲೆ ಕೂಡ್ಲಿಗಿ ಕ್ಷೇತ್ರದಲ್ಲಿ ಇಂದು ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು ಕೂಡ್ಲಿಗಿ ತಾಲ್ಲೂಕಿನ ಗ್ರಾಮೀಣ ಭಾಗಗಳಿಗೆ ತೆರಳಲಿದ್ದಾರೆ.

ಅವರು ಬೆಳಿಗ್ಗೆ 11.30ಕ್ಕೆ ಕಾನಾಮಡಗು ಶ್ರೀ ಶರಣ ಬಸವೇಶ್ವರ



ಮಠಕ್ಕೆ ಭೇಟಿ ಕೊಡುವರು. ಮಧ್ಯಾಹ್ನ 12ಕ್ಕೆ ಹೊಸಹಳ್ಳಿಯಲ್ಲಿ 25 ಲಕ್ಷ ರೂ. ವೆಚ್ಚದ ಗ್ರಾಮ ಪಂಚಾಯ್ತಿ ಕಟ್ಟಡದ ಅಡಿಗಲ್ಲು ಸಮಾರಂಭದಲ್ಲಿ ಭಾಗವಹಿಸುವರು. 12.20ಕ್ಕೆ ಹೊಸಹಳ್ಳಿಯಲ್ಲಿ 25ಲಕ್ಷ ರೂ. ವೆಚ್ಚದ ಗ್ರಂಥಾಲಯ ಕಟ್ಟಡದ ಅಡಿಗಲ್ಲು ಸಮಾರಂಭದಲ್ಲಿ ಭಾಗವಹಿಸುವರು. 1 ಗಂಟೆಗೆ ಕೂಡ್ಲಿಗಿ ಪಟ್ಟಣದಲ್ಲಿ ಕೃಷಿ ಅಭಿಯಾನ ವಾಹನಕ್ಕೆ ಚಾಲನೆ, 1.10ಕ್ಕೆ ಕೂಡ್ಲಿಗಿ ಪಟ್ಟಣದಲ್ಲಿ 106 ಲಕ್ಷ ರೂ. ವೆಚ್ಚದ ಕೃಷಿ ಇಲಾಖಾ ನೂತನ ಕಟ್ಟಡದ ಅಡಿಗಲ್ಲು ಸಮಾರಂಭದಲ್ಲಿ ಭಾಗವಹಿಸುವರು. 1.20ಕ್ಕೆ ಕೂಡ್ಲಿಗಿ ಪಟ್ಟಣದ ಶ್ರೀ ಕೊತ್ತಲಾಂಜನೇಯ ದೇವಸ್ಥಾನದಿಂದ ಪ್ರವಾಸಿ ಮಂದಿರದವರೆಗೆ ನಡೆಯುವ ಮೆರವಣಿಗೆಯಲ್ಲಿ ಭಾಗವಹಿಸುವರು.

2 ಗಂಟೆಗೆ ಪ್ರವಾಸಿಮಂದಿರದ ಆವರಣದಲ್ಲಿ 'ಕೆರೆಗಳಿಗೆ ನೀರು ತುಂಬಿಸುವ ಹೋರಾಟ ಸಮಿತಿ'ಯಿಂದ ಶಾಸಕರಿಗೆ ಹಮ್ಮಿಕೊಂಡಿರುವ ಅಭಿನಂದನಾ ಸಮಾರಂಭ ಹಾಗೂ ಸನ್ಮಾನ ಸಮಾರಂಭದಲ್ಲಿ ಭಾಗವಹಿಸುವರು ಎಂದು ಶಾಸಕರ ಆಪ್ತ ಸಹಾಯಕ ಬಿ.ಶ್ರೀಕಾಂತ್ ತಿಳಿಸಿದ್ದಾರೆ.

## ನಗರದಲ್ಲಿಂದು ಜೆಡಿಎಸ್ ಪ್ರತಿಭಟನೆ

ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ನೀಡುವಲ್ಲಿ ಮಾಡಿರುವ ತಾರತಮ್ಯ ಹಾಗೂ ಕೇಂದ್ರ, ರಾಜ್ಯಗಳೆರಡೂ ಕೊರೊನಾ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಸೂಕ್ತವಾಗಿ ಸ್ಪಂದಿಸದೇ ಇರುವುದನ್ನು ಖಂಡಿಸಿ, ಜಿಲ್ಲಾ ಜೆಡಿಎಸ್‌ನಿಂದ ಇಂದು ನಗರದಲ್ಲಿ ಪ್ರತಿಭಟನೆ ನಡೆಯಲಿದೆ.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹಾಗೂ ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ ಅವರುಗಳು ಪ್ರತಿಭಟನೆಯ ನೇತೃತ್ವ ವಹಿಸುವರು. ಶ್ರೀ ಬೀರಲಿಂಗೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಡಲಿದೆ.

# ಅಕ್ಟೋಬರ್ 6 ರಿಂದ ಶರಣ ಸಂಸ್ಕೃತಿ ಉತ್ಸವ



ಚಿತ್ರದುರ್ಗ, ಜೂ.27 - ಇಲ್ಲಿನ ಮುರುಘಾ ಮಠದಿಂದ ಬರುವ ಅಕ್ಟೋಬರ್ 6 ರಿಂದ 17ರವರೆಗೆ ಶರಣ ಸಂಸ್ಕೃತಿ ಉತ್ಸವವನ್ನು ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಶ್ರೀ ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದ್ದಾರೆ.

ಶ್ರೀಮಠದಲ್ಲಿ ಮೊನ್ನೆ ನಡೆದ ಶರಣ ಸಂಸ್ಕೃತಿ ಉತ್ಸವದ ಪೂರ್ವಸಿದ್ಧತೆ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿಯ ಉತ್ಸವದಲ್ಲಿ ವಿಶೇಷ ಪ್ರವಚನ, ವೀರಗಾಸೆ, ಭಜನೆ, ಜಾನಪದ ಸ್ಪರ್ಧೆಗಳು ಹಾಗು 75ನೇ ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿರುವ ಈ ಸಂದರ್ಭದಲ್ಲಿ ಅದರ ಸವಿನೆನಪಿನಲ್ಲಿ ಇಡೀ ಶರಣ ಸಂಸ್ಕೃತಿ ಉತ್ಸವವನ್ನು ಅತ್ಯಂತ ರಚನಾತ್ಮಕವಾಗಿ ಆಯೋಜಿಸಲಾಗುವುದು ಎಂದು ಮಾಹಿತಿ ನೀಡಿದರು.

ಉತ್ಸವವನ್ನು ಯಶಸ್ವಿಯಾಗಿ ನೆರವೇರಿಸಲು ಉತ್ಸವ ಸಮಿತಿ ಗೌರವಾಧ್ಯಕ್ಷರಾದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶ್ರೀ ಶಿವಬಸವ ಸ್ವಾಮೀಜಿ, ಶ್ರೀ ಬಸವಕುಮಾರ ಸ್ವಾಮೀಜಿ, ಶ್ರೀ ಬಸವ ಪ್ರಭು ಸ್ವಾಮೀಜಿ ಹಾಗು ವಿವಿಧ ಸ್ವಾಮಿಗಳಿಂದ 70 ಲಕ್ಷ ರೂ., ರಾಜ್ಯ ಖನಿಜ ನಿಗಮದ ಅಧ್ಯಕ್ಷ ಎಸ್. ಲಿಂಗಮೂರ್ತಿ 10 ಲಕ್ಷ ರೂ.ಗಳು ಸೇರಿದಂತೆ ಶಂಕರಮೂರ್ತಿ, ಬಸವರಾಜ ಪಾಟೀಲ್, ಪಟೇಲ್ ಶಿವಕುಮಾರ್, ಸಿದ್ದಾಪುರ ನಾಗಣ್ಣ, ಎಲ್.ಬಿ. ರಾಜಶೇಖರ್, ತಾಜ್‌ಪೀರ್, ಮಹಡಿ ಶಿವಮೂರ್ತಿ, ಜಿ.ಟಿ. ಸುರೇಶ್, ಭರಮಸಾಗರ ಮಹಾಂತೇಶ್, ಮರುಳಾರಾಧ್ಯ, ಮಾರುತೇಶ್ ಹೊಳಲ್ಕೆರೆ ಮತ್ತು ಮಾದಾರ ಸಮಾಜದ ತಿಪ್ಪೇಸ್ವಾಮಿ, ಶ್ರೀಮತಿ ದೇವಿಕುಮಾರಿ ವಿಶ್ವನಾಥ್ ಇನ್ನಿತರರು ಕಾಣಿಕೆ ಮತ್ತು ದವಸ-ಧಾನ್ಯ ನೀಡುವುದಾಗಿ ವಾಗ್ದಾನ ಮಾಡಿದರು.

ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಸ್ವಾಮೀಜಿ, ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಮಡಿವಾಳ ಗುರುಪೀಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ, ಯಾದವ ಗುರುಪೀಠದ ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ, ಗಾಣಿಗ ಗುರುಪೀಠದ ಶ್ರೀ ಬಸವಕುಮಾರ ಸ್ವಾಮೀಜಿ, ಛಲವಾದಿ ಗುರುಪೀಠದ ಶ್ರೀ ಬಸವ ನಾಗಿದೇವ ಸ್ವಾಮೀಜಿ, ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಶಿರಸಿ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಹಾವೇರಿ ಹೊಸಮಠದ ಶ್ರೀ ಬಸವ ಶಾಂತಲಿಂಗ ಸ್ವಾಮೀಜಿ, ಚಳ್ಳಕೆರೆಯ ಶ್ರೀ ಬಸವ ಕಿರಣ ಸ್ವಾಮೀಜಿ, ತಿಪ್ಪೇರುದ್ರ ಸ್ವಾಮೀಜಿ, ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಖನಿಜ ನಿಗಮದ ಅಧ್ಯಕ್ಷ ಎಸ್. ಲಿಂಗಮೂರ್ತಿ, ಎಲ್.ಬಿ. ರಾಜಶೇಖರ್, ತಾಜ್‌ಪೀರ್, ಫಾತ್ಯರಾಜನ್, ನಿರಂಜನ ಮೂರ್ತಿ, ಶಂಕರಮೂರ್ತಿ, ಎಸ್.ವಿ. ನಾಗರಾಜಪ್ಪ, ಕೆಇಬಿ ಷಣ್ಮುಖಪ್ಪ, ಮರುಳಾರಾಧ್ಯ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

ಶರಣ ಸಂಸ್ಕೃತಿ ಉತ್ಸವದ ಕಾರ್ಯಾಧ್ಯಕ್ಷ ಕೆ.ಎಸ್. ನವೀನ್ ಸ್ವಾಗತಿಸಿದರು. ಜಿತೇಂದ್ರ ನಿರೂಪಿಸಿದರು.

## ರೈತರಿಗೆ ವರದಾನವಾದ ಬದು ನಿರ್ಮಾಣ ಕಾಮಗಾರಿ




ಕೂಡ್ಲಿಗಿ, ಜೂ.27- ಮಾಕನಡಕು ಗ್ರಾಮ ಪಂಚಾಯ್ತಿಗೆ ಸೇರಿದ ಕುರಿಹಟ್ಟಿ ಗ್ರಾಮದ ರೈತರಾದ ಜಿ. ಓಬಣ್ಣ ತಮ್ಮದೇ ಜಮೀನಿನಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ 14 ಜನ ಕೂಲಿ ಕಾರ್ಮಿಕರೊಂದಿಗೆ ಬದು ನಿರ್ಮಾಣ ಕಾಮಗಾರಿಯಲ್ಲಿ ತೊಡಗಿಸಿಕೊಂಡಿದ್ದಾರೆ.

ಈ ಕುರಿತು ಮಾತನಾಡಿದ ಗ್ರಾ.ಪಂ. ಮಾಜಿ ಸದಸ್ಯ ಓಬಣ್ಣ, ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲಿ ಕಾರ್ಮಿಕರಿಗೆ ಕೆಲಸ ಇಲ್ಲದೇ ತೊಂದರೆ ಅನುಭವಿಸುತ್ತಿರುವಾಗ ಸರ್ಕಾರದ ಉದ್ಯೋಗ ಖಾತ್ರಿ ಯೋಜನೆಯು ಬಡ ಕೂಲಿ ಕಾರ್ಮಿಕರಿಗೆ ವರದಾನವಾದಂತಾಗಿದೆ. ಒಬ್ಬ ಕೂಲಿ ಕಾರ್ಮಿಕನಿಗೆ ಒಂದು ದಿನಕ್ಕೆ 289 ರೂಪಾಯಿಗಳನ್ನು ನೀಡುತ್ತಿದ್ದು, ಬಡವರು ತಮ್ಮ ಜಮೀನುಗಳನ್ನು ಅಚ್ಚುಕಟ್ಟಾಗಿ ಮಾಡಿಕೊಳ್ಳಲು ಹಾಗೂ ಜೀವನವನ್ನು ಸಾಗಿಸಲು ಈ ಯೋಜನೆ ಸಹಕಾರಿಯಾಗಿದೆ ಎಂದಿದ್ದಾರೆ.

## ಸ್ಕೌಟ್ಸ್-ಗೈಡ್ಸ್‌ನಿಂದ ಆಹಾರ ಕಿಟ್



ದಾವಣಗೆರೆ, ಜೂ. 27- ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವತಿಯಿಂದ ಜಿಲ್ಲಾ ಮುಖ್ಯ ಆಯುಕ್ತ ಮುರುಘರಾಜೇಂದ್ರ ಚಿಗಟೇರಿ ಅವರು, ಜಿಲ್ಲೆಯಲ್ಲಿ ಕೋವಿಡ್ ಸಂದರ್ಭದಲ್ಲಿ ಸಂಕಷ್ಟಕ್ಕೀಡಾದ ಮತ್ತು ಆಹಾರದ ಅವಶ್ಯಕತೆ ಇದ್ದವರಿಗೆ 100 ಆಹಾರ ಕಿಟ್ (ತಿಂಡಿ), ವಾಟರ್ ಬಾಟಲ್ ಮತ್ತು ಮಾಸ್ಕ್ ಗಳನ್ನು ವಿತರಿಸಿದರು. ಕಾರ್ಯಕ್ರಮವನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ಥಾನಿಕ ಆಯುಕ್ತ ಎ.ಶಿವಪ್ಪ ಆಯೋಜಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತ ಎ.ಪಿ.ಷಡಕ್ಷರಪ್ಪ, ಯೂಥ್ ಕಮಿಟಿ ಸದಸ್ಯರಾದ ಅಶ್ವಿನಿ ಮತ್ತು ನವೀನ್ ರಾಜ್ ಉಪಸ್ಥಿತರಿದ್ದರು.

## ಬೀಡಿ ಕಾರ್ಮಿಕರಿಗೆ ಧಾನ್ಯದ ಕಿಟ್



ದಾವಣಗೆರೆ, ಜೂ.27- ಲಾಕ್‌ಡೌನ್ ಸಂದರ್ಭದಲ್ಲಿ ಉದ್ಯೋಗವಿಲ್ಲದೆ ಸಂಕಷ್ಟ ಎದುರಿಸುತ್ತಿರುವ ಬೀಡಿ ಕಾರ್ಮಿಕರಿಗೆ ನೆರಳು ಬೀಡಿ ಕಾರ್ಮಿಕರ ವತಿಯಿಂದ ಆಹಾರ ಧಾನ್ಯದ ಕಿಟ್ ವಿತರಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ನ್ಯಾಯವಾದಿ ಎಲ್.ಹೆಚ್. ಅರುಣ್ ಕುಮಾರ್ ಪ್ರಶಂಸಿಸಿದರು.

ನೆರಳು ಬೀಡಿ ಕಾರ್ಮಿಕರ ಯೂನಿಯನ್ ವತಿಯಿಂದ ಬೀಡಿ ಕಾರ್ಮಿಕರಿಗೆ ಆಹಾರದ ಕಿಟ್ ವಿತರಣೆಗೆ ಎಸ್‌ಎಸ್‌ಎಂ ನಗರದಲ್ಲಿ ಚಾಲನೆ ನೀಡಲಾಯಿತು.

ನೆರಳು ಬೀಡಿ ಕಾರ್ಮಿಕರ ಯೂನಿಯನ್ ಅಧ್ಯಕ್ಷರಾದ ಜಬೀನಾ ಖಾನಂ ಮಾತನಾಡಿದರು. ಕಾರ್ಯಕ್ರಮದಲ್ಲಿ ಯೂನಿಯನ್ ಕಾರ್ಯದರ್ಶಿ ಕರಿಬಸಪ್ಪ ಎಂ, ಪದಾಧಿಕಾರಿಗಳಾದ ನಾಹೇರ್ ಬಾನು, ಶಿರಿನ್ ಬಾನು, ನೂರ್ ಫಾತಿಮಾ, ಸಬರೀನ್ ತಾಜ್, ನಗೀನಾ ಬಾನು ಮತ್ತಿತರರು ಉಪಸ್ಥಿತರಿದ್ದರು.

## ಆರ್ಕೆಸ್ಟ್ರಾ ಕಲಾವಿದರಿಗೆ ಪರಿಹಾರ ನೀಡಿ

ದಾವಣಗೆರೆ, ಜೂ.27- ಕೋವಿಡ್ ಲಾಕ್‌ಡೌನ್‌ನಿಂದಾಗಿ ಆರ್ಕೆಸ್ಟ್ರಾ ಕಲಾವಿದರು ಸಂಕಷ್ಟಕ್ಕೀಡಾಗಿದ್ದು, ಸರ್ಕಾರ ಇವರಿಗೆ ರಸಮಂಜರಿ ಕಾರ್ಯಕ್ರಮಗಳಿಗೆ ಅನುಮತಿ ಜೊತೆಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವಂತೆ ದಾವಣಗೆರೆ ಫ್ರೆಂಡ್ಸ್ ಮೆಲೋಡಿ ಮಾಲೀಕರಾದ ಟಿ. ಪರಮೇಶ್ ಜ್ಯೂನಿಯರ್ ವಿಷ್ಣುವರ್ಧನ್ ಸರ್ಕಾರವನ್ನು ಒತ್ತಾಯಿಸಿದ್ದಾರೆ

## ಸೂರಿಲ್ಲದವರಿಗೆ ನಿವೇಶನ ನೀಡಲು ಒತ್ತಾಯ

ದಾವಣಗೆರೆ, ಜೂ.27- ಸ್ವಂತ ಸೂರಿಲ್ಲದೇ ನಾಲ್ಕೈದು ದಶಕಗಳಿಂದ ಬಾಡಿಗೆ ಮನೆಯಲ್ಲಿ ವಾಸವಾಗಿರುವ ಕೆಲವರಿಗೆ ಹಾಗೂ ಬಾಡಿಗೆ ಮನೆಗೆ ಅಡ್ವಾನ್ಸ್ ಕೊಡಲಾಗದ ಸ್ಥಿತಿಯಲ್ಲಿರುವ ದಕ್ಷಿಣ ಭಾಗದ ಜನರಿಗೆ ಸರ್ಕಾರಿ ಜಾಗದಲ್ಲಿ ನಿವೇಶನವನ್ನು ಉಚಿತವಾಗಿ ಆಗಲಿ ಅಥವಾ ಕಡಿಮೆ ದರದಲ್ಲಿ ನೀಡುವಂತೆ ಭಾರತೀಯ ನ್ಯೂ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮುದ್ದಾಪುರದ ರೆಹಮಾನ್ ಒತ್ತಾಯಿಸಿದರು.

ನಿನ್ನೆ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಾಡಿಗೆ ಕಟ್ಟಲು ಆಗದಂತಹ ಸ್ಥಿತಿಯಲ್ಲಿ ಜನರಿದ್ದಾರೆ. ಸ್ವಂತ ಸೂರಿಲ್ಲದೆ ಬಾಡಿಗೆ, ಮುಂಗಡ ಕಟ್ಟಲಾಗದೆ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅಂತಹವರಿಗೆ ಗ್ರಾಮೀಣ ಪ್ರದೇಶಕ್ಕೆ ಹೊಂದಿಕೊಂಡಿರುವ ಸರ್ಕಾರಿ ಜಮೀನಿನಲ್ಲಿ ಉಚಿತ ನಿವೇಶನವಾಗಲೀ ಅಥವಾ ಕಡಿಮೆ ದರಕ್ಕೆ ನಿವೇಶನ ನೀಡುವಂತೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಪದಾಧಿಕಾರಿಗಳಾದ ಮೌನೇಶ್ವರಚಾರಿ, ಹುಸೇನ್‌ಸಾಬ್, ಮೊಹಮ್ಮದ್ ಹನೀಫ್, ಗ್ಯಾರೇಜ್ ಮುನ್ನಾ, ಮಿಯಾಸಾಬ್ ಉಪಸ್ಥಿತರಿದ್ದರು.

## ಜೈನ್ ವಿದ್ಯಾಲಯದಲ್ಲಿ ಯೋಗ ದಿನ




ದಾವಣಗೆರೆ, ಜೂ. 27- ಜೈನ್ ತಾಂತ್ರಿಕ ಮಹಾವಿದ್ಯಾಲಯದ ಯಾಂತ್ರಿಕ ವಿಭಾಗ, ರಾಷ್ಟ್ರೀಯ ಸೇವಾ ಸಮಿತಿ ಹಾಗೂ ಉನ್ನತ ಭಾರತ ಅಭಿಯಾನ ಅಡಿಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಯೋಗ ಶಿಕ್ಷಕರಾದ ಶ್ರೀಮತಿ ಬಿ.ಎಸ್. ಪ್ರತಿಮಾ, ಕಾಲೇಜಿನ ಪ್ರಾಂಶುಪಾಲ ಡಾ|| ಡಿ.ಬಿ. ಗಣೇಶ್, ಯಾಂತ್ರಿಕ ವಿಭಾಗದ ಮುಖ್ಯಸ್ಥ ಡಾ|| ರಜನೀಶ್ ಎನ್. ಮರಿಗೌಡರ್ ಉಪಸ್ಥಿತರಿದ್ದರು. ಸಹಾಯಕ ಪ್ರಾಧ್ಯಾಪಕ ಕೆ.ಎಸ್. ವೀರೇಶ್ ಕುಮಾರ್, ಕೆ.ಜಿ. ಅಭಿಷೇಕ್, ಬಿ.ಹೆಚ್. ಶಿವಯೋಗಿ, ಎಂ.ಹೆಚ್. ಬಸವರಾಜ್ ಉಪಸ್ಥಿತರಿದ್ದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
ಪ್ರಸಾದ ದಾಸೋಹ
ಇಂದಿನ ಪ್ರಸಾದ ವಿತರಕರು
ಶ್ರೀ ಅಭಿಲಾಷ್ ಇವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟ್ ಮಾರಾಟಕ್ಕೆ (ಕಾರ್ನರ್)**
ಕರ್ನಾಟಕ ಗೃಹ ಮಂಡಳಿಯಲ್ಲಿ
1) 50X80 ಉತ್ತರ, ಪಶ್ಚಿಮ. 2) 40x40 ದಕ್ಷಿಣ, ಪಶ್ಚಿಮ. 3) 50x100 ದಕ್ಷಿಣ, ಪಶ್ಚಿಮ. 4) ಉತ್ತರ. ಪೂರ್ವ. 5) 60x90 ಪೂರ್ವ. 50x80 ದಕ್ಷಿಣ. 40x60 ಪೂರ್ವ. 30x50 ಪಶ್ಚಿಮ. 30x40 ಉತ್ತರ
ಕಿರಣ್ ಬೂಸ್ನೂರ್ : 98440-63409

**ಸೈಟ್‌ಗಳು ಮಾರಾಟಕ್ಕಿವೆ**
30x54, East ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
50x50 East, ಡಾಲರ್ಸ್ ಕಾಲೋನಿಯಲ್ಲಿ,
30x48, East ಹೊಸ ಬನಶಂಕರಿ ಲೇಔಟ್‌ನಲ್ಲಿ,
30x50 East KHB ಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ, ಅನ್ನ ದಾಸೋಹದ ದಾನಿಗಳು
ದೇವದತ್ ಗೋರೆ
ಬೆಂಗಳೂರು.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಮನೆ ಕೆಲಸ, ಅಡುಗೆ ಮತ್ತು ಹಾಸಿಗೆಯಲ್ಲಿರುವ ವಯಸ್ಸಾದ ಹೆಣ್ಣು ಮಗಳನ್ನು ನೋಡಿಕೊಳುವ ಹೆಣ್ಣು ಮಕ್ಕಳು ಬೇಕಾಗಿದ್ದಾರೆ (ಬೆಳಗ್ಗೆ 9 ರಿಂದ ರಾತ್ರಿ 8 ಗಂಟೆವರೆಗೆ) ತಕ್ಷಣ ಸಂಪರ್ಕಿಸಿ
ಮೊ: 94496 79324

**ಮನೆ ಮಾರಾಟಕ್ಕೆ**
1) ವಿದ್ಯಾನಗರ 40x60 ಸೌತ್, 30x40 ಉತ್ತರ. 2) ಆಂಜನೇಯ ಬಡಾವಣೆ 30x40 ಉತ್ತರ, 30x40 ಸೌತ್. 3) M. C. C. 'ಬಿ' ಬ್ಲಾಕ್. 44x60, 40x60, 22x60
ಕಿರಣ್ ಬೂಸ್ನೂರ್ : 98440-63409

**ROOM FOR RENT**
Room with All facilities @ Vidyanagar First Bus Stop.
Contact : 63615 93954

**ಜಮೀನು ಬೇಕಾಗಿದೆ**
ದಾವಣಗೆರೆಗೆ ಹತ್ತಿರ 10 ಕಿ.ಮೀ ವ್ಯಾಪ್ತಿಯಲ್ಲಿ ರಸ್ತೆಗೆ ಹೊಂದಿಕೊಂಡಂತಹ ಜಮೀನು ಅಥವಾ ತೋಟ ಕೊಳ್ಳಲು ಬೇಕಾಗಿದೆ.
63616 62669

**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ**
ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ
ಫೋನ್ ನಂ: 74118 62216

**ಜಮೀನು ಮಾರಾಟಕ್ಕಿದೆ**
ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮೀಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ,
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, ಪುಷ್ಪ ಮಹಾಲಿಂಗಪ್ಪ ಸ್ಕೂಲ್ ಹತ್ತಿರ 30x56, 30x56 North ಅಕ್ಕ-ಪಕ್ಕ, 30x38, 30x38, East ಅಕ್ಕ-ಪಕ್ಕ, 30x50 North, 40x60 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**3BHK ಮನೆ ಬೇಕಾಗಿದೆ**
ವಿದ್ಯಾನಗರ, ತರಳಬಾಳು ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆ ಮೊದಲನೇ ಹಂತ, ಎಸ್.ಎಸ್. ಬಡಾವಣೆ 'ಎ' ಅಥವಾ 'ಬಿ' ಬ್ಲಾಕ್, ನಿಜಲಿಂಗಪ್ಪ ಬಡಾವಣೆಯಲ್ಲಿ 3 ಬೆಡ್‌ರೂಂ, ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಬೇಕಾಗಿದೆ.
94483 23796
76761 38170

**ಸುವರ್ಣಾವಕಾಶ**
ಯುವಕ/ಯುವತಿಯರಿಗೆ, ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 25 ಸಾವಿರದಿಂದ 1 ಲಕ್ಷದ ವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿ ಕೊಳ್ಳುವ ಅದ್ಭುತ ಸುವರ್ಣಾವಕಾಶ. ಸಂಪರ್ಕಿಸಿ :
93435 46891, 70194 26891

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಮನೆ ಬಾಡಿಗೆಗಿದೆ**
3 BHK/ 2BHK, ಕಾರ್ಪೊರೇಷನ್ ನೀರು, ಬೋರ್, ಕಾರ್ ಪಾರ್ಕಿಂಗ್ ವ್ಯವಸ್ಥೆಗಳಿರುವ ವಾಸ್ತು ಪ್ರಕಾರದ ಪೂರ್ವ ಮುಖದ, ಸ್ವತಂತ್ರವಾದ ಮನೆ ಮೆಡಿಕಲ್ ಹಾಸ್ಟೆಲ್ ಪಕ್ಕದಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
63015 58346

**ಹೊಂಬಾಳ್ ಇ-ಮಾರ್ಟ್**
ಬಾಕಿ ಉಳಿದಿರುವ ಒಂದು ಮಾರ್ಟನ್ನು ತೆರೆಯಲು ಕೇವಲ ಒಬ್ಬರು ಹೂಡಿಕೆದಾರರು ಬೇಕಾಗಿದ್ದಾರೆ. ಕನಿಷ್ಠ 3% ನಿರ್ದಿಷ್ಟ ಆದಾಯದ ಜೊತೆಗೆ 50% ಲಾಭವನ್ನು ಕೊಡಲಾಗುವುದು. ಆಸಕ್ತರು ಕರೆ ಮಾಡಿ ಚರ್ಚಿಸಿ
9008985112

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ, ಸಂಪರ್ಕಿಸಬೇಕಾದ ವಿಳಾಸ
ಸಾಕೇತ್ ಎಂಟರ್ ಪ್ರೈಸಸ್
ಪ್ಲಾಟ್ ನಂ: 5-E ಕರೂರ್ ಇಂಡಸ್ಟ್ರೀಯಲ್ ಏರಿಯಾ ಡಿ.ಐ.ಸಿ. ಆಫೀಸ್ ಎದುರು, ದಾವಣಗೆರೆ.
ದೂರವಾಣಿ ಸಂಖ್ಯೆ: 9482671264

**Urgent Requierment**
Manappuram home finance Ltd
Davanagere Branch
Sales officer - 10post (fresher/experience)
Credit officer 01 (0-6months experience)
operation officer 01 (0-6months experience)
Graduation mandatory, Age below 25years
Contact Number: 8197740054
Ashoka Road, Davanagere

**ಬೇಕಾಗಿದ್ದಾರೆ**
ಆಪೆ ಆಟೋ ಡೀಜಲ್ ಪ್ಯಾಸೆಂಜರ್, ಗೂಡ್ಸ್ ಆಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಶೋ ರೂಂಗೆ ಕೆಳಕಂಡ ಹುದ್ದೆಗಳಿಗೆ ಬೇಕಾಗಿದ್ದಾರೆ
ಸೇಲ್ಸ್ ಮ್ಯಾನೇಜರ್-1
Computer Knowledge and Experience in Commercial Vehicle Field.
ತಾಲ್ಲೂಕುವಾರು ವಾಹನಗಳ ಮಾರಾಟ ಮಾಡಲು
ಸೇಲ್ಸ್ ಎಕ್ಸಿಕ್ಯೂಟಿವ್ಸ್-6
ಆಸಕ್ತರು ಸೂಕ್ತ ದಾಖಲಾತಿಗಳೊಂದಿಗೆ ನೇರವಾಗಿ ಸಂಪರ್ಕಿಸಿ:
ಸಮಯ : ಮ 3 ರಿಂದ 5.
ಫೋನ್ / ಮೊಬೈಲ್ ವಿಚಾರಣೆ ಇರುವುದಿಲ್ಲ.
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-6.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ KHB ಯಲ್ಲಿ ಪೂರ್ವ ದಿಕ್ಕಿನ 30x50 ಸೈಟ್ ಮಾರಾಟಕ್ಕಿದೆ & ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಎರಡನೇ ಮಹಡಿಯಲ್ಲಿ 2 BHK 2 ಮನೆಗಳು ಲೀಜ್ ಅಥವಾ ಬಾಡಿಗೆಗೆ ಇರುತ್ತವೆ.
9448874011

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**Wanted ITI (Fitter)**
Freshers for a manufacturing unit situated in Davangere Industrial area
Walk in interview at Sri Sai International Hotel
on 29 Tuesday from 11.30 am to 1.30 pm
Vacant post 20 man Power
99026 97197, 95356 25353

**WANTED**
SALES MAN
SALES GIRLS
CASHIER
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

# ಜಿನ್‌ಪಿಂಗ್ ಪ್ರಬಲ; ಕಮ್ಯುನಿಸ್ಟ್ ಪಾರ್ಟಿಗೆ ಸಮಸ್ಯೆ

## ಚೀನಾ ಅಧ್ಯಕ್ಷಾವಧಿಯಲ್ಲಿ ದುರ್ಬಲವಾಗುತ್ತಿರುವ ಪಕ್ಷ

ಬೀಜಿಂಗ್, ಜೂ. 27 - ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಅಧಿಕಾರದಲ್ಲಿ ಮುಂದುವರೆದಷ್ಟೂ ಆಡಳಿತಾರೂಢ ಕಮ್ಯುನಿಸ್ಟ್ ಪಾರ್ಟಿ ಸಮಸ್ಯೆಗಳು ಹೆಚ್ಚಾಗಲಿವೆ ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾಗೆ ಜುಲೈ 1ರಂದು ನೂರು ವರ್ಷ ತುಂಬಲಿದೆ. ವಿಪರ್ಯಾಸ ಎಂದರೆ, ಪಕ್ಷವೀಗ ತನ್ನ ಅಸ್ತಿತ್ವಕ್ಕಾಗಿ ಜಿನ್‌ಪಿಂಗ್ ಅವಲಂಬಿಸಿದೆ.

ಡೆಂಗ್ ಕ್ಸಿಯೋಪಿಂಗ್ ಅವರು ಅಧ್ಯಕ್ಷರಾಗಿದ್ದ ವೇಳೆ ಸಾಮೂಹಿಕ ನಾಯಕತ್ವದಲ್ಲಿ ಪಕ್ಷ ಮುನ್ನಡೆಯುತ್ತಿತ್ತು. ಆದರೆ, ಜಿನ್‌ಪಿಂಗ್ ಆ ಪದ್ಧತಿಯನ್ನು ಬದಲಿಸಿದ್ದಾರೆ.

2012ರಿಂದ ಜಿನ್‌ಪಿಂಗ್ ಅವರು ಏಕವ್ಯಕ್ತಿ ನಾಯಕತ್ವದೊಂದಿಗೆ ಪಕ್ಷ ನಡೆಸುತ್ತಿದ್ದಾರೆ. 2018ರಲ್ಲಿ ಅಧ್ಯಕ್ಷರಿಗೆ ಎರಡು ವರ್ಷಗಳ ಮಿತಿ ಎಂಬ ನಿಯಮವನ್ನು ತೆಗೆದು ಹಾಕಲಾಗಿದೆ. ಪ್ರಸಕ್ತ 68 ವರ್ಷದ ಕ್ಸಿ, ಆಜೀವ ಅಧ್ಯಕ್ಷರಾಗಬಹುದು.

ಚೀ ಜಾಗತಿಕ ಪ್ರತಿರೋಧ ಎದುರಿಸುತ್ತಿರುವ ಸಂದರ್ಭದಲ್ಲಿ ಅವರ ನಾಯಕತ್ವ ಅಗತ್ಯವಾಗಿದೆ ಎಂದು ಬೆಂಬಲಿಗರು ಹೇಳುತ್ತಿದ್ದಾರೆ. ಆದರೆ, ಎರಡು ಅವಧಿ ಮೀರಿ ಮುಂದುವರಿಕೆ ಅಸ್ಥಿರತೆ ತರಬಹುದು ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.

ಎರಡನೇ ಅವಧಿ ಪೂರ್ಣಗೊಂಡ ನಂತರ ಕಮ್ಯುನಿಸ್ಟ್ ಪಕ್ಷದ ಸಾಮಾನ್ಯ ಕಾರ್ಯದರ್ಶಿ ಸ್ಥಾನದ ಉತ್ತರಾಧಿಕಾರಿಯನ್ನು ನೇಮಿಸಲಾಗುತ್ತಿತ್ತು. ಆದರೆ, ಜಿನ್‌ಪಿಂಗ್ ಅವರು ಎರಡನೇ ಅವಧಿ ಮೀರಿ ಮುಂದುವರೆಯುತ್ತಿರುವುದರಿಂದ, ಉತ್ತರಾಧಿಕಾರತ್ವ ಇನ್ನೂ ಸ್ಪಷ್ಟವಾಗಿಲ್ಲ.

ಪಕ್ಷಕ್ಕೆ ಉತ್ತರಾಧಿಕಾರಿ ಬರುವುದು ಇನ್ನೂ ಸ್ಪಷ್ಟವಾಗದ ಕಾರಣ, ಜಿನ್‌ಪಿಂಗ್ ಸರ್ವೋಚ್ಚ ನಾಯಕರಾಗಿ ಮುಂದುವರೆದಿದ್ದಾರೆ. ಪಕ್ಷವನ್ನು ಅವರು ಯಾವ ರೀತಿ ಪುನರ್‌ರಚಿಸಲಿದ್ದಾರೆ ಎಂಬುದು ಅವರ ಉತ್ತರಾಧಿಕಾರತ್ವ ಹಾಗೂ ಪಕ್ಷದ ಭವಿಷ್ಯವನ್ನು ತಿಳಿಸಲಿದೆ ಎಂದು ಹಾಂಕಾಂಗ್‌ನ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ತಿಳಿಸಿದೆ.

ಹಿಂದಿನ ಅಧ್ಯಕ್ಷರಂತೆ ಜಿನ್‌ಪಿಂಗ್ ಮೊದಲ ಅವಧಿ ಮುಗಿದಾಗ ಉತ್ತರಾಧಿಕಾರಿ ನೇಮಿಸಿರಲಿಲ್ಲ. ಈಗಲೂ ಅವರು ಉತ್ತರಾಧಿಕಾರಿ ನೇಮಿಸುವ ಸಾಧ್ಯತೆ ಕಡಿಮೆ ಎನ್ನಲಾಗುತ್ತಿದೆ.

# ಉತ್ತಮ ಕಾರ್ಯ, ಸೇವೆಗಳು ಎಂದೆಂದಿಗೂ ಅಮರ




ದಾವಣಗೆರೆ, ಜೂ.27- ಪ್ರಪಂಚದಲ್ಲಿ ಜನ್ಮ ತಾಳಿದ ಮೇಲೆ ಸಾವು ಖಚಿತ, ಹುಟ್ಟು ಹಾಗೂ ಸಾವಿನ ಮಧ್ಯೆ ನಡೆಯುವ ಜೀವನ ಸಂಘರ್ಷಗಳೇ ಒಂದು ನೆನಪು. ಆದರೆ ಉತ್ತಮ ಕಾರ್ಯ, ಸೇವೆಗಳು ಎಂದಿಗೂ ಅಮರವಾಗಿರುತ್ತವೆ ಎಂದು ಮೌಲಾನಾ ಮಹಮ್ಮದ್ ಹನೀಫ್ ರಜಾ ಹೇಳಿದರು.

ಜಿಲ್ಲಾಡಳಿತದ ಸಹಯೋಗದೊಂದಿಗೆ ಮುಸ್ಲಿಂ ಸಮಾಜದ ವತಿಯಿಂದ ಇಲ್ಲಿನ ತಾಜ್ ಪ್ಯಾಲೇಸ್‌ನಲ್ಲಿ ಕೊರೊನಾ ವಾರಿಯರ್ಸ್‌ಗೆ ಇಂದು ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕೊರೊನಾ ಮಹಾಮಾರಿ ಸಂದಿಗ್ಧ ಸ್ಥಿತಿಯಲ್ಲಿ ಜೀವನ ಕಳೆಯುತ್ತಿದ್ದ ಸಂದರ್ಭದಲ್ಲಿ ರೋಗಿಗಳ ಚಿಕಿತ್ಸೆಗಾಗಿ ಕೋವಿಡ್ ಕೇಂದ್ರ ತೆರೆದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟ ಸಮಾಜದ ಮುಖಂಡರ ಸೇವೆ ಶ್ಲಾಘನೀಯ ಎಂದು ಪ್ರಶಂಸಿಸಿದ ಮೌಲಾನಾ ಅವರು ಜಾತಿ, ಭೇದ ಮರೆತು ಸಮಾಜ ಸೇವೆ ಮಾಡಿದ ಗಣ್ಯರು, ಸಮಾಜ ಸೇವಕರ ಈ ಕಾರ್ಯಸ್ಮರಣೀಯ. ಜೀವನ ಶಾಶ್ವತ ಅಲ್ಲ, ಸಮಾಜಕ್ಕಾಗಿ ಮಾಡಿದ ಸೇವೆ ಶಾಶ್ವತ ಎಂದರು.

ಹಳೇ ಭಾಗದಲ್ಲಿನ ರೋಗಿಗಳ ಅನುಕೂಲತೆಯನ್ನು ದೃಷ್ಟಿಯನ್ನಿಟ್ಟುಕೊಂಡು ಮಿತ್ರವೃಂದದವರು ಸೇರಿ ಆಯೋಜಿಸಿದ ಈ ಸೇವೆಗೆ ಸ್ಪಂದಿಸಿದ ಜಿಲ್ಲಾಡಳಿತದ ಮಾರ್ಗದರ್ಶನ ನಮಗೆ ಧೈರ್ಯ ನೀಡಿತು ಎಂದು ಮುಸ್ಲಿಂ ಮುಖಂಡ ಜೆ. ಅಮಾನುಲ್ಲಾ ಖಾನ್ ಹೇಳಿದರು.

ತಾಜ್ ಪ್ಯಾಲೇಸ್‌ನ ಮಾಲೀಕ ದಾದಾಪೀರ್, ಪಾಲಿಕೆ ಸದಸ್ಯ ಸೈಯದ್ ಚಾರ್ಲಿ ಅವರನ್ನು ಸೇರಿದಂತೆ ಸಮಾಜದ ಮುಖಂಡರ ಪರೋಕ್ಷ ಬೆಂಬಲ ಈ ಸೇವೆಗೆ ಪುಷ್ಠಿ ನೀಡಿತು ಎಂದರು.

ತಹಶೀಲ್ದಾರ್ ಗಿರೀಶ್, ಸಿಪಿಐ ಗಜೇಂದ್ರಪ್ಪ, ಟಾರ್ಗೆಟ್ ಅಸ್ಲಂ, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಫಯಾಜ್ ಆಹ್ಮದ್ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ವೈದ್ಯ ವೃಂದದವರಿಗೆ, ಸಮಾಜ ಸೇವಕರಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು.

# 17ನೇ ವಾರ್ಡಿನಲ್ಲಿ 2ನೇ ಬಾರಿಗೆ ಎಸ್ಸೆಸ್‌ರಿಂದ ಉಚಿತ ಕೊರೊನಾ ಲಸಿಕಾ ಶಿಬಿರ



ದಾವಣಗೆರೆ, ಜೂ.27- ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಉಚಿತವಾಗಿ ನೀಡಿರುವ ಕೊರೊನಾ ಲಸಿಕೆ ನೀಡುವ ಶಿಬಿರವು 17ನೇ ವಾರ್ಡಿನಲ್ಲಿ ಎರಡನೇ ಬಾರಿಗೆ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನದಲ್ಲಿ ನಡೆಯಿತು. 18 ಮೇಲ್ಪಟ್ಟ ನಾಗರಿಕರಿಗೆ ಲಸಿಕೆ ನೀಡಲಾಯಿತು.

ಶ್ರೀ ರಾಘವೇಂದ್ರ ಸ್ವಾಮಿ ಮಠದ ಅಧ್ಯಕ್ಷ ಸುತೀರ್ಥ ಕಟ್ಟಿ, ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ ಅವರುಗಳು ನಾಗರಿಕರಿಗೆ ಲಸಿಕೆ ಹಾಕಿಸುವುದರ ಮುಖಾಂತರ ಸಮಾರಂಭವನ್ನು ಉದ್ಘಾಟಿಸಿದರು.

ಕಾಂಗ್ರೆಸ್ ಮುಖಂಡರುಗಳಾದ ಪಂಚಪ್ಪ ತೇರದಾಳ್, ವಾಟಾಳ್ ನಾಗ ರಾಜ್, ಮಠದ ಪದಾಧಿಕಾರಿಗಳಾದ ಗೋಪಾಲಾಚಾರ್, ಪ್ರಕಾಶ್ ನಾಡಿಗೇರ್, ಶಾಂತೇಶ್ ಗುತ್ತಲ್, ಬದ್ರೀಶ್ ದೇವಡೆ, ಶ್ರೀಧರ್ ಘಟಿಕರ್, ಸುಶೀಲೇಂದ್ರ ದೇವಡೆ, ಶಾಂತಮ್ಮ ದೇವಡೆ, ಸಮೀರ್ ದೇವಡೆ, ಯತಿರಾಜ್, ಮಾರುತಿ, ಎಂ.ಜಿ. ಶ್ರೀಕಾಂತ್, ಶ್ರೀಕಾಂತ್ ಬದ್ರಿ, ಅಶೋಕ್ ದೇವಡೆ, ಸುನಿಲ್, ವಿನೋದ್, ರಾಮು, ಶ್ರೀನಿವಾಸ್, ಕಾಂಗ್ರೆಸ್ ಪಕ್ಷದ ವಾರ್ಡ್ ಮುಖಂಡರಾದ ವೆಂಕಟೇಶ್, ಶ್ರೀಕಾಂತ್ ಬಗರೆ, ಮಧು ಪವಾರ್, ಪರಶುರಾಮ್, ಪ್ರದೀಪ್ ಕನ್ನವರ್, ಅಶು ಸಾವಂತ್, ಯುವರಾಜ್, ಗಂಗಾಧರ್, ತರುಣ್ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಜಿಲ್ಲಾ ಯುವ ಮೋರ್ಚಾದಿಂದ ಲಸಿಕಾ ಅಭಿಯಾನ

ದಾವಣಗೆರೆ, ಜೂ.24- ನಗರದ 19ನೇ ವಾರ್ಡ್‌ನ ಉರ್ದು ಸ್ಕೂಲ್‌ನಲ್ಲಿ ಕೋವಿಡ್ ಲಸಿಕಾ ಅಭಿಯಾನವನ್ನು ಬಿಜೆಪಿ ಜಿಲ್ಲಾ ಯುವ ಮೋರ್ಚಾ ವತಿಯಿಂದ ನಡೆಸಲಾಯಿತು.

ಕಾರ್ಯಕ್ರಮವನ್ನು ಮೋರ್ಚಾ ಅಧ್ಯಕ್ಷರು ಮತ್ತು ವಾರ್ಡ್‌ನ ಪಾಲಿಕೆ ಸದಸ್ಯ ಆರ್.ಎಲ್. ಶಿವಪ್ರಕಾಶ್ ಉದ್ಘಾಟಿಸಿ ಮಾತನಾಡಿ, ಜಗತ್ತಿನಲ್ಲಿ ಕೋವಿಡ್ ವಿರುದ್ಧ ಹೋರಾಡಲು ಲಸಿಕೆಯೊಂದೇ ಮಾರ್ಗ. ಕಡ್ಡಾಯವಾಗಿ ಲಸಿಕೆ ತೆಗೆದುಕೊಳ್ಳಿರಿ ಎಂದರು.

ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಯಲ್ಲೇಶ್ ಮಾತನಾಡಿ, ಕೇಂದ್ರ ಸರ್ಕಾರ 18 ವರ್ಷ ಮೇಲ್ಪಟ್ಟ ಎಲ್ಲಾ ನಾಗರಿಕರಿಗೂ ಉಚಿತ ಲಸಿಕೆ ನೀಡುವ ವಾಗ್ದಾನ ಮಾಡಿದೆ. ಸದ್ಬಳಕೆ ಮಾಡಿಕೊಳ್ಳಿರಿ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಯುವ ಮೋರ್ಚಾ ಕಾರ್ಯದರ್ಶಿ ಪ್ರಶಾಂತ್, ಸಂತೋಷ್, ಅನಿಲ್, ಶಾಂತ ಕುಮಾರಸ್ವಾಮಿ, ಕಂಚಿಕೇರಿ ರುದ್ರೇಶ್ ಇನ್ನಿತರರಿದ್ದರು.

# ನ್ಯಾಮತಿಯಲ್ಲಿ ಜೂಜು ಆರು ಜನರ ಬಂಧನ

ನ್ಯಾಮತಿ, ಜೂ.27- ಇಸ್ಪೀಟ್ ಜೂಜಾಟದ ಮೇಲೆ ದಾಳಿ ನಡೆಸಿರುವ ನ್ಯಾಮತಿ ಪೊಲೀಸರು 6 ಮಂದಿಯನ್ನು ಬಂಧಿಸಿ, 13,600 ನಗದು ವಶಪಡಿಸಿಕೊಂಡಿದ್ದಾರೆ.

ನ್ಯಾಮತಿ ಪೊಲೀಸ್ ಠಾಣೆ ವ್ಯಾಪ್ತಿಯ ಜಯನಗರ ಗ್ರಾಮದಲ್ಲಿ ಇಸ್ಪೀಟ್ ಜೂಜಾಟದ ವೇಳೆ ನ್ಯಾಮತಿ ಪಿಎಸ್ಐ ರಮೇಶ್ ಅವರು ದಾಳಿ ಮಾಡಿದ್ದಾರೆ.

# ಸ್ಥಳೀಯ ವಿದ್ಯುತ್ ಗುತ್ತಿಗೆದಾರರಿಗೆ ಅನ್ಯಾಯ

ದಾವಣಗೆರೆ, ಜೂ.27- ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಮೂಲಕ ಕಾಮಗಾರಿಗಳನ್ನು ಗುತ್ತಿಗೆ ನೀಡುವುದರಿಂದ ಕೇವಲ ಬಂಡವಾಳ ಶಾಹಿಗಳಿಗೆ ಗುತ್ತಿಗೆ ಸಿಗಲಿದ್ದು, ಸ್ಥಳೀಯರಿಗೆ ಅನ್ಯಾಯವಾಗುತ್ತಿದೆ ಎಂದು ಮಹಾನಗರ ಪಾಲಿಕೆ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಹೆಚ್. ಜಯಣ್ಣ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಹೇಳುವ ಸರ್ಕಾರಗಳೇ ನಿರುದ್ಯೋಗ ಸೃಷ್ಟಿ ಮಾಡಿ ಬಡಜನರನ್ನು ಸಂಕಷ್ಟಕ್ಕೆ ಗುರಿ ಮಾಡುತ್ತಿವೆ. ಅನೇಕ ವರ್ಷಗಳಿಂದ ಪಿಡಬ್ಲ್ಯೂಡಿ ಹಾಗೂ ಗುತ್ತಿಗೆದಾರರ ಪರವಾನಿಗೆ ಪಡೆದು ಪಾಲಿಕೆಯ ವಿದ್ಯುತ್ ಹಾಗೂ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸುವ ಜೊತೆಗೆ, ಬಡ ಜನರಿಗೆ ಕೆಲಸ ಕೊಡಲಾಗುತ್ತದೆ. ಲಾಕ್‌ಡೌನ್ ಸಂದರ್ಭದಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ಒಳಚರಂಡಿ, ವಿದ್ಯುತ್ ಸಂಪು ಕಾಮಗಾರಿಗಳನ್ನು ನಿರ್ವಹಿಸಿ ನೂರಾರು ಜನರಿಗೆ ಉದ್ಯೋಗ ನೀಡಲಾಗಿದೆ. ಆದರೆ ಇಂದಿನ ಪೆಟ್ರೋಲ್, ಡೀಸೆಲ್, ಕಬ್ಬಿಣ, ಸಿಮೆಂಟ್ ಸೇರಿದಂತೆ ವಿದ್ಯುತ್ ಸಂಪರ್ಕಕ್ಕೆ ಬೇಕಾಗುವ ವಸ್ತುಗಳ ಬೆಲೆಗಳು ಏರಿಕೆಯಾಗಿವೆ.

2018 ರಿಂದ ಸರ್ಕಾರ ಎಲ್ಲಾ ಕಾಮಗಾರಿಗಳಿಗೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯುತ್ತಿದೆ. ಇದಕ್ಕಿಂತ ಮೊದಲು ಪಾಲಿಕೆಯಲ್ಲಿ 5 ಲಕ್ಷ ರೂ. ಗಳ ಕಾಮಗಾರಿಗಳನ್ನು ಮ್ಯಾನ್ಯುವಲ್ ಟೆಂಡರ್ ಕರೆಯುತ್ತಿದ್ದರು. ಆಗ ಸ್ಥಳೀಯರಿಗೆ ಕಾಮಗಾರಿಗಳು ಸಿಗುತ್ತಿದ್ದವು. ನಿರುದ್ಯೋಗಿ ಯುವಕರಿಗೆ ಕೆಲಸ ದೊರಕುತ್ತಿತ್ತು. ಆದರೆ ಇ-ಪ್ರಕ್ಯೂರ್‌ಮೆಂಟ್ ಟೆಂಡರ್‌ನಿಂದಾಗಿ ಕೇವಲ ಬಂಡವಾಳ ಶಾಹಿಗಳಿಗೆ ಅನುಕೂಲವಾಗಿದೆ ಎಂದರು.

ಬಂಡವಾಳ ಶಾಹಿಗಳು ಎಸ್.ಆರ್. ದರಕ್ಕೆ 15 ರಿಂದ 20 ರಷ್ಟು ಕಡಿಮೆ ಮಾಡಿ ಟೆಂಡರ್ ಮೂಲಕ ಕಾಮಗಾರಿ ಗುತ್ತಿಗೆ ಪಡೆಯುತ್ತಿದ್ದಾರೆ. ಇದರಿಂದ ನಿರುದ್ಯೋಗ ಸಮಸ್ಯೆ ಸೃಷ್ಟಿಯಾಗುತ್ತದೆ. ಮ್ಯಾನ್ಯುಯಲ್ ಟೆಂಡರ್ ಕರೆದರೆ ಸ್ವಲ್ಪ ಮಟ್ಟಿನ ನಿರುದ್ಯೋಗ ಸಮಸ್ಯೆ ನಿವಾರಣೆ ಜೊತೆಗೆ, ಸ್ಥಳೀಯ ಗುತ್ತಿಗೆದಾರರಿಗೆ ಕಾಮಗಾರಿಗಳು ಸಿಗುತ್ತವೆ ಎಂದು ಹೇಳಿದರು.

ಪಾಲಿಕೆಯಲ್ಲಿ ಸರ್ಕಾರದ ಆದೇಶದಂತೆ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ಸುಮಾರು 5 ಕೋಟಿ ರೂ.ಗೆ ಒಂದು ಪ್ಯಾಕೇಜ್‌ನಂತೆ 125 ಕೋಟಿ ರೂ.ಗಳ ಟೆಂಡರ್ ಕರೆಯಲು ಸಿದ್ಧತೆ ನಡೆಯುತ್ತಿದೆ. ಇದರಿಂದ ಸಣ್ಣ ಪುಟ್ಟ ಗುತ್ತಿಗೆದಾರರಿಗೆ ಬಹಳ ಅನ್ಯಾಯವಾಗುತ್ತಿದೆ.

ಕೋವಿಡ್ ಲಾಕ್‌ಡೌನ್‌ನಿಂದ ಎಲ್ಲಾ ಗುತ್ತಿಗೆದಾರರು ಸಂಕಷ್ಟದಲ್ಲಿದ್ದಾರೆ. ಯಾವುದೇ ಕಾರಣಕ್ಕೂ 5 ಕೋಟಿ ರೂ. ಪ್ಯಾಕೇಜ್ ಟೆಂಡರ್‌ಗೆ ರಾಜ್ಯ ಸರ್ಕಾರ ಅನುಮತಿ ನೀಡಬಾರದು ಎಂದು ಜಯ್ಯಣ್ಣ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಶಿವಣ್ಣ, ಎಂ.ಎನ್. ವೇಣು, ಸಿ. ವೀರಣ್ಣ, ಎಂ.ಎಸ್. ರುದ್ರ ಮುನಿ, ಕೆ. ಸುನೀಲ್‌ಕುಮಾರ್, ರಾಜ ಶೇಖರ್, ರಾಜು, ಸಿದ್ದರಾಜ್, ನೀಲಕಂಠಪ್ಪ, ರಾಕೇಶ್, ನಿರಂಜನ್ ಉಪಸ್ಥಿತರಿದ್ದರು.

# ತಾಂಡಾಗಳಲ್ಲಿ ಇಂದು ಕೊರೊನಾ ಲಸಿಕೆ ಜಾಗೃತಿ

ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ವತಿಯಿಂದ ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಹೆದ್ನೆ ತಾಂಡಾದಲ್ಲಿ, 12 ಗಂಟೆಗೆ ದೊಡ್ಡ ಮಾಗಡಿ ಬಂಜಾರ ತಾಂಡಾದಲ್ಲಿ ಕೊರೊನಾ ಲಸಿಕೆ ಜಾಗೃತಿ ಅಭಿಯಾನ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ಇಲಾಖೆಯ ಜಿಲ್ಲಾ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ತಿಳಿಸಿದ್ದಾರೆ.

### ಭದ್ರಾ ಜಲಾಶಯ

ಇಂದಿನ ಮಟ್ಟ : 154 ಅಡಿ
ಒಳ ಹರಿವು: 2512 ಕ್ಯೂಸೆಕ್ಸ್
ಹೊರ ಹರಿವು : 81 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 138.8 ಅಡಿ

# ನೂರಾರು ಕೆರೆ, ವ್ಯಾಪಾರ ಪೇಟೆಗಳನ್ನು ನಿರ್ಮಿಸಿದ ಕೆಂಪೇಗೌಡರು




ಹೊನ್ನಾಳಿ, ಜೂ.27- ನೂರಾರು ಕೆರೆಗಳನ್ನು ನಿರ್ಮಾಣ ಮಾಡಿ ಹಾಗೂ ವ್ಯಾಪಾರ, ವಹಿವಾಟಿಗೆ ಪೇಟೆಗಳನ್ನು ನಿರ್ಮಾಣ ಮಾಡಿ, ಅತ್ಯಂತ ಯೋಜನಾ ಬದ್ಧವಾಗಿ ಬೃಹತ್ ಬೆಂಗಳೂರನ್ನು ನಿರ್ಮಿಸಿದ ಕೀರ್ತಿ ನಾಡ ಪ್ರಭು ಕೆಂಪೆಗೌಡರಿಗೆ ಸಲ್ಲುತ್ತದೆ ಎಂದು ಗ್ರೇಡ್-2 ತಹಶೀಲ್ದಾರ್ ಸುರೇಶ್ ಹೇಳಿದರು.

ನಗರದ ತಾಲ್ಲೂಕು ಕಚೇರಿಯಲ್ಲಿ ಇಂದು ಏರ್ಪಾಡಾಗಿದ್ದ ನಾಡಪ್ರಭು ಕೆಂಪೇಗೌಡರ 512 ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದು ಇಡೀ ವಿಶ್ವದಲ್ಲೇ ಬೆಂಗಳೂರು ಗುರುತಿಸಿಕೊಂಡಿದ್ದರೆ ಅದಕ್ಕೆ ಕಾರಣ ಧೀಮಂತ ರಾಜ ಹಾಗೂ ಸಹೃದಯಿ ಕೆಂಪೇಗೌಡ ಎಂದರೆ ತಪ್ಪಾಗಲಾರದು. ಅವರ ಆಡಳಿತದಲ್ಲಿ ಕೋಟೆ ಕೊತ್ತಲಗಳು, ಕೆರೆ ಕಟ್ಟೆಗಳು ಹಾಗೂ ಕಲ್ಯಾಣಿಗಳನ್ನು ಕಟ್ಟಿಸಿದ್ದರು. ಈಗ ಅವುಗಳು ಕಣ್ಮರೆಯಾಗಿವೆ. ಈಗ ಕೆಂಪೇಗೌಡರ ಸವಿನೆನಪಿಗಾಗಿ ಅವುಗಳನ್ನು ಉಳಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಅವರ ಆದರ್ಶ ಹಾಗೂ ಮೌಲ್ಯಗಳನ್ನು ನಾಡಿನ ಜನತೆಗೆ ಪರಿಚಯಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಅವರು ಹೇಳಿದರು.

ಶಿರಸ್ತೇದಾರ್ ಸುಭಾಷ್, ಪತ್ರಕರ್ತ ಶ್ರೀನಿವಾಸ್, ಪ್ರಥಮ ದರ್ಜೆ ಸಹಾಯಕ ರವಿಕುಮಾರ್, ರಾಜಸ್ವ ನಿರೀಕ್ಷಕ ರಮೇಶ್, ಮಂಜುನಾಥ್, ನಾಗರಾಜ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> ಒಂದು ಸುಂದರವಾದ ನಗರವನ್ನು ಹೇಗೆ ನಿರ್ಮಾಣ ಮಾಡಬೇಕೆಂಬುದನ್ನು ಕೆಂಪೇಗೌಡರಿಂದ ಕಲಿಯಬೇಕು. ಅಂದಿನ ಕಾಲದಲ್ಲಿ ಯಾವುದೇ ಆಧುನಿಕ ಪರಿಕರಗಳು ಇಲ್ಲದಿದ್ದರೂ, ಅತ್ಯಂತ ವ್ಯವಸ್ಥಿತವಾಗಿ ನಗರ ನಿರ್ಮಾಣ ಮಾಡಿದರು. ಅವರನ್ನು ಜಗತ್ತಿನ ಮೊದಲ ಇಂಜಿನಿಯರ್ ಎಂದು ಕರೆದರೂ ತಪ್ಪಿಲ್ಲ ಎಂದ ಅವರು, ಕೆಂಪೇಗೌಡರನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸುವ ಬದಲು, ಅವರ ಸಾಧನೆ ಹಾಗೂ ಪ್ರಯತ್ನಗಳನ್ನು ಯುವಕರಿಗೆ ತಿಳಿಸಬೇಕು. ಆಗ ಅವರೂ ಸಹ ಅವರ ಹಾದಿಯಲ್ಲೇ ನಗರ ನಿರ್ಮಾಣದಂತಹ ಯೋಜನೆಗಳನ್ನು ತರುವ ಬಗ್ಗೆ ಯೋಚಿಸಬಹುದು.
>
> - ಸುರೇಶ್,
> ತಹಶೀಲ್ದಾರ್ ಗ್ರೇಡ್ -2, ಹೊನ್ನಾಳಿ

# ಪಾದಚಾರಿ ಮಾರ್ಗದ ಕಾಮಗಾರಿ ಚಾಲನೆ



ದಾವಣಗೆರೆ, ಜೂ.27 - ನಗರ ಪಾಲಿಕೆಯ 38ನೇ ವಾರ್ಡಿನ ಎಂ.ಸಿ.ಸಿ ಬಿ ಬ್ಲಾಕ್ 7ನೇ ಮುಖ್ಯ ರಸ್ತೆಯಲ್ಲಿ ಪಾದಚಾರಿ ಮಾರ್ಗದ ಕಾಮಗಾರಿಗೆ ಈ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ಅವರು ಇಂದು ಭೂಮಿ ಪೂಜೆ ನೆರವೇರಿಸಿದರು.

ಡಾ. ಗುರುಪ್ರಸಾದ್, ಬಿ.ಹೆಚ್. ಪರಶುರಾಮಪ್ಪ, ನಿವೃತ್ತ ಇಇ ಗುರುಮೂರ್ತಿ, ಅಮಿತ್ ಅಂಬರ್‌ಕರ್, ಕಂಟ್ರ್ಯಾಕ್ಟರ್, ಬಸವರಾಜಪ್ಪ, ಆಲೂರು ಜ್ಯೋತಿರ್ಲಿಂಗ, ಪ್ರಮೋದ್, ಪ್ರಜ್ವಲ್, ಜಿ.ಎಸ್. ಸತೀಶ್, ದೊಗ್ಗಳ್ಳಿ ಚಂದ್ರಶೇಖರ್, ಜಿ.ಎಸ್. ಮನು, ವಿವೇಕಾನಂದ ಕರಿಗೌಡ್ರು, ನಿಖಿಲ್ ಮಂತ್ರಿ, ನೀಲಕಂಠಪ್ಪ, ಮಧುಸೂದನ್, ಎಇ ಕೆ.ಬಿ. ಮಂಜುನಾಥ್ ಮುಂತಾದವರು ಪಾಲ್ಗೊಂಡಿದ್ದರು.

ಹಲವು ಜನೋಪಯೋಗಿ ಯೋಜನೆಗಳನ್ನು ಕೈಗೆತ್ತಿಕೊಂಡು ನಾಗರಿಕ ಸೌಲಭ್ಯಗಳನ್ನು ತ್ವರಿತವಾಗಿ ಕಾರ್ಯರೂಪಕ್ಕೆ ತರುತ್ತಿರುವ ಗಡಿಗುಡಾಳ್ ಮಂಜುನಾಥ್ ಅವರ ಸೇವೆಗೆ ನಾಗರಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

# ಜಿಲ್ಲೆಯಲ್ಲಿ ಇಂದು - ನಾಳೆ ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ನಗರಾಭಿವೃದ್ಧಿ ಖಾತೆ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರು ಇಂದು ಮತ್ತು ನಾಳೆ ಜಿಲ್ಲಾ ಪ್ರವಾಸ ಕಾರ್ಯಕ್ರಮ ಕೈಗೊಂಡಿದ್ದಾರೆ.

ಇಂದು ಬೆಳಿಗ್ಗೆ 10 ಗಂಟೆಗೆ ಚನ್ನಗಿರಿಗೆ ಆಗಮಿಸುವರು. ನಂತರ ಚನ್ನಗಿರಿ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ನಿರ್ಮಿಸಲಾಗಿರುವ ನೂತನ ಆಕ್ಸಿಜನ್ ಪ್ಲಾಂಟ್ ಉದ್ಘಾಟಿಸುವರು. ಬೆಳಿಗ್ಗೆ 11 ಗಂಟೆಗೆ ತಾಲ್ಲೂಕಿನಲ್ಲಿ ಕೋವಿಡ್-19 ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಮೌದ್ಗಿಲ್ ಆಂಜನೇಯ ಸ್ವಾಮಿ ಕಲ್ಯಾಣ ಮಂದಿರದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಮಧ್ಯಾಹ್ನ 12.30 ಕ್ಕೆ ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ ಸಾಂತ್ವನ ಹೇಳುವ ಕಾರ್ಯದಲ್ಲಿ ಭಾಗವಹಿಸುವರು.

ಮಧ್ಯಾಹ್ನ 3 ಗಂಟೆಗೆ ಹೊನ್ನಾಳಿಗೆ ತೆರಳುವ ಸಚಿವರು, ತಾಲ್ಲೂಕು ಆಸ್ಪತ್ರೆಯಲ್ಲಿ ನಿರ್ಮಿಸಲಾಗಿರುವ ಆಕ್ಸಿಜನ್ ಪ್ಲಾಂಟ್ ಉದ್ಘಾಟಿಸುವರು. ಸಂಜೆ 4.30 ಗಂಟೆಗೆ ಹರಿ ಹರಕ್ಕೆ ಆಗಮಿಸಿ, ತಾಲ್ಲೂಕು ಆಸ್ಪತ್ರೆಯಲ್ಲಿ ನಿರ್ಮಿಸಲಾಗಿ ರುವ ಆಕ್ಸಿಜನ್ ಪ್ಲಾಂಟ್ ಉದ್ಘಾಟನೆ ನೆರವೇರಿಸುವರು.

ನಾಳೆ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಟ್ರಾಮಾ ಕೇರ್ (ತುರ್ತು ಚಿಕಿತ್ಸಾ ಘಟಕ) ಸೆಂಟರ್‌ನ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬೆಳಿಗ್ಗೆ 11 ಗಂಟೆಗೆ ಜಿಲ್ಲೆಯಲ್ಲಿ ಕೋವಿಡ್-19 ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸುವರು. ಮಧ್ಯಾಹ್ನ 2 ಗಂಟೆಗೆ ಹುಬ್ಬಳ್ಳಿಗೆ ಪ್ರಯಾಣ ಬೆಳೆಸುವರು.

# ಕೊಠಿ ನಿಧನಕ್ಕೆ ವಾಮದೇವಪ್ಪ ಶೋಕ

ದಾವಣಗೆರೆ, ಜೂ.27- ಶ್ರೇಷ್ಠ ಕಲಾಚೇತನರೂ, 'ಕುಂಚಬ್ರಹ್ಮ' ಎಂದೇ ಹೆಸರಾಗಿದ್ದ ಪ್ರೊ. ಬಿ.ಆರ್. ಕೊಠಿ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ಕೊಠಿ ನಿಧನದಿಂದ ಕಲಾ ಜಗತ್ತಿಗೆ ತುಂಬಲಾರದ ನಷ್ಟವಾಗಿದೆ. ಅವರ ಅಗಲಿಕೆಯಿಂದ ಕಲಾ ಲೋಕ ಬಡವಾಗಿದೆ ಎಂದು ಹೇಳಿದ್ದಾರೆ.


# ರಣದೀಪ್ ಸುರ್ಜೇವಾಲಾ ನೇತೃತ್ವದಲ್ಲಿ ಆನ್‌ಲೈನ್ ಸಭೆ



ದಾವಣಗೆರೆ, ಜೂ.27- ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕದ ಉಸ್ತುವಾರಿ ರಣದೀಪ್ ಸುರ್ಜೇವಾಲಾ ನೇತೃತ್ವದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಝೂಮ್ ಆನ್ಲೈನ್ ಮೀಟಿಂಗ್ ನಡೆಯಿತು. ಈ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾರ್ಯಾಧ್ಯಕ್ಷರಾದ ಧ್ರುವನಾರಾಯಣ್, ಸಲೀಂ ಮಹಮದ್, ಈಶ್ವರ್ ಖಂಡ್ರೆ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಭಾಗವಹಿಸಿ, ಕೋವಿಡ್ ಸಮಯದಲ್ಲಿ ಸರ್ಕಾರದ ನಡವಳಿಕೆ ಹಾಗೂ ಸಂತ್ರಸ್ತರಿಗೆ ನೀಡಿದ ಚಿಕಿತ್ಸೆ ಮತ್ತು ಚಿಕಿತ್ಸೆಯ ನಂತರ ಅವರ ಪರಿಸ್ಥಿತಿ ಅವಲೋಕಿಸುವ ಕುರಿತು ಸಲಹೆ ನೀಡಿದರು. ಪಕ್ಷದ ಜಿಲ್ಲಾಧ್ಯಕ್ಷ ಎಚ್.ಬಿ. ಮಂಜಪ್ಪ, ಬ್ಲಾಕ್ ಅಧ್ಯಕ್ಷರುಗಳಾದ ಮಾಗಾನಹಳ್ಳಿ ಪರಶುರಾಮ, ಅಯೂಬ್ ಪೈಲ್ವಾನ್, ಎಪಿ ಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್, ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಮುಖಂಡ ಬೇತೂರ್ ಕರಿಬಸಪ್ಪ, ತರಕಾರಿ ಚಂದ್ರಪ್ಪ, ಸಾಮಾಜಿಕ ಜಾಲತಾಣದ ಕೆ.ಎಲ್.ಹರೀಶ್ ಬಸಾಪುರ ಮತ್ತಿತರರಿದ್ದರು.

# ನೂತನ ಶಿಕ್ಷಣ ನೀತಿಯಲ್ಲಿ ಕನ್ನಡಕ್ಕೆ ಅವಗಣನೆ



ದಾವಣಗೆರೆ, ಜೂ.27 - ನೂತನ ಶಿಕ್ಷಣ ನೀತಿಯಲ್ಲಿ ಕನ್ನಡ ಭಾಷೆಯ ಅವಗಣನೆ ಮಾಡುತ್ತಿರುವುದು ತೀವ್ರ ಖಂಡನೀಯ ಎಂದು ಕನ್ನಡಪರ ಸಂಘಟಕ ಕೆ.ರಾಘವೇಂದ್ರ ನಾಯರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನೂತನ ಶಿಕ್ಷಣ ನೀತಿಯ ಭಾಗವಾಗಿ ರಾಜ್ಯ ಸರ್ಕಾರವು ಮೂರು ವರ್ಷದ ಪದವಿ ಶಿಕ್ಷಣ ವ್ಯವಸ್ಥೆಯನ್ನು ನಾಲ್ಕು ವರ್ಷಕ್ಕೆ ವಿಸ್ತರಣೆ ಮಾಡಿದೆ. ಇದು ಸ್ವಾಗತಾರ್ಹ ಹೌದಾದರೂ ಇಲ್ಲಿ ಗಮನಿಸಬೇಕಾದ ಆತಂಕದ ವಿಷಯವೆಂದರೆ ಈ ಮೊದಲು ಇದ್ದಂತಹ 3 ವರ್ಷದ ಪದವಿ ಶಿಕ್ಷಣ ವ್ಯವಸ್ಥೆಯಲ್ಲಿ ಮೊದಲ 2 ವರ್ಷ ಕಡ್ಡಾಯವಾಗಿ ಭಾಷಾ ಕಲಿಕೆಯ ನಿಬಂಧನೆಯಿತ್ತು. ಆದರೆ ಈ ಹೊಸ ವ್ಯವಸ್ಥೆಯಲ್ಲಿ ನಾಲ್ಕು ವರ್ಷಗಳ ಅವಧಿಯಲ್ಲಿ ಮೊದಲ ಒಂದು ವರ್ಷ ಮಾತ್ರ ಭಾಷಾ ಕಲಿಕೆಗೆ ಅವಕಾಶವಿದೆ. ಈ ರೀತಿಯಾಗಿ ಭಾಷಾ ಕಲಿಕೆಯನ್ನು ಮೊಟಕು ಗೊಳಿಸಿರುವುದು ಸರ್ವಥಾ ಖಂಡನೀಯವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಈಗಾಗಲೇ ತನ್ನ ಆಕ್ಷೇಪಣೆಯನ್ನು ಸರ್ಕಾರಕ್ಕೆ ಸಲ್ಲಿಸಿ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಕನ್ನಡ ಭಾಷೆಗೆ ಅತ್ಯಂತ ಭವ್ಯವಾದ ಮತ್ತು ಶ್ರೀಮಂತವಾದ ಪರಂಪರೆಯಿದೆ, ಇತಿಹಾಸವಿದೆ. ಅತ್ಯಂತ ಆಳವಾಗಿ ಕನ್ನಡ ಭಾಷೆಯ ಅಧ್ಯಯನವಾಗಬೇಕಾಗಿ ರುವುದು ಪದವಿ ಶಿಕ್ಷಣ ವ್ಯವಸ್ಥೆಯಲ್ಲಿಯೇ ಹೊರತು ಪ್ರಾಥಮಿಕ ಅಥವಾ ಪ್ರೌಢ ಶಿಕ್ಷಣ ಹಂತದಲ್ಲಿ ಅಲ್ಲ. ಆದರೆ ಬಹುಮುಖ್ಯವಾದ ಈ ಪದವಿ ಶಿಕ್ಷಣದ ಹಂತದಲ್ಲಿ ಕನ್ನಡ ಭಾಷಾ ಕಲಿಕೆಯ ಅವಕಾಶವನ್ನು ಮೊಟಕುಗೊಳಿಸುವುದ ರಿಂದ ಕನ್ನಡ ಭಾಷೆಯನ್ನು ಸಮಗ್ರವಾಗಿ ಕಲಿಯುವ ಅವಕಾಶದಿಂದ ವಿದ್ಯಾರ್ಥಿಗಳು ವಂಚಿತವಾಗುವ ಸಾಧ್ಯತೆ ಇದೆ.

ಎಂಟು ಬಾರಿ ಕನ್ನಡ ಭಾಷಾ ಸಾಹಿತ್ಯಕ್ಕೆ ಜ್ಞಾನ ಪೀಠ ಪ್ರಶಸ್ತಿ ಬಂದಿರುವುದನ್ನು ಸರ್ಕಾರ ಮರೆಯಬಾರದು. ಕನ್ನಡ ಭಾಷೆಯ ಆಳವಾದ ಅಧ್ಯಯನ ಮಾಡಲು ಅವಕಾಶವಾಗುವಂತೆ ಕನ್ನಡ ಭಾಷೆಯನ್ನು ನಾಲ್ಕು ವರ್ಷಗಳ ಪದವಿ ಶಿಕ್ಷಣ ವ್ಯವಸ್ಥೆಯಲ್ಲಿ ಮೊದಲ ಮೂರು ವರ್ಷ ಕಡ್ಡಾಯವಾಗಿ ಕನ್ನಡ ಭಾಷೆಯನ್ನೇ ಕಲಿಯುವ ಅವಕಾಶವಿರುವಂತೆ ಹೊಸ ಶಿಕ್ಷಣ ನೀತಿಯಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕು ಎಂದು ನಾಯರಿ ಅವರು ಸರ್ಕಾರಕ್ಕೆ ಹಕ್ಕೊತ್ತಾಯ ಮಾಡಿದ್ದಾರೆ.

ಹುಟ್ಟುಹಬ್ಬದ ಶುಭಾಶಯಗಳು



ಶ್ರೀ ಬಸವರಾಜು ವಿ ಶಿವಗಂಗಾ ಶ್ರೀ ಶಿವಕುಮಾರ್ ಆರ್.

ಸ್ನೇಹ ಜೀವಿಗಳೂ, ಯುವ ಮುಖಂಡರೂ, ಆತ್ಮೀಯರೂ ಆದ
ಶ್ರೀ ಬಸವರಾಜು ವಿ. ಶಿವಗಂಗಾ
ಹಾಗೂ
ಶ್ರೀ ಶಿವಕುಮಾರ್ ಆರ್.
ಇವರುಗಳಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.
ಭಗವಂತನು ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

* ಚಕ್ರಪಾಣಿ ಕೆ. ಬಿ.
* ರತೀಶ್ ರೆಡ್ಡಿ
* ರಾಘವೇಂದ್ರ ಜಿ.ಆರ್. ಗ್ರಾ.ಪಂ.ಸದಸ್ಯರು
* ಅಶೋಕ್ ತಲ್‌ವಾರ್
* ಚೇತನ್ ಮೈಸೂರು (ಚೌಧರಿ)
* ಶ್ರೀನಿವಾಸ ತಾಳ್ಯ, ಗ್ರಾ.ಪಂ.ಸದಸ್ಯರು
* ಅರುಣ್ ಶಿಂಧೆ (ಆರ್.ಟಿ.ಓ.)
* ರಘು (ಸೈನ್ಸ್ ಅಕಾಡೆಮಿ)
* ಮನ್ಸೂರ್
* ಮುರುಗೇಶ್, (ದುರ್ಗಾಂಬಿಕ ಕ್ಯಾಂಟೀನ್)
* ರುದ್ರೇಶ (ದುರ್ಗಾಂಬಿಕ ಕ್ಯಾಂಟೀನ್) DTS
* ಪ್ರಶಾಂತ್, ಈಶ್ವರಿ ಆಡಿಯೋ
* ಭರತ್, ಕೃಷಿಕರು
* ಅಂಜಿನಿ ನಿಟುವಳ್ಳಿ
* ರಾಕೇಶ್ (ಪಿಂಟೂ)
* ಸ್ಟಾರ್ ಪಚ್ಚಿ
* ಧರಣೇಂದ್ರ ಪ್ರಸಾದ್
* ಸಂತೋಷ್ ಪಾಟೀಲ್
* ವೀರೇಶ್ ಪಾಟೀಲ್
* ಲಂಕೇಶ್ * ಶಶಿ

ಹಾಗೂ ಗೆಳೆಯರ ಬಳಗ

## ಇ - ಕೋರ್ಟ್‌ಗಳ ಜೊತೆ ಜಮೀನು ದಾಖಲೆಗಳ ಜೋಡಣೆ

ನವದೆಹಲಿ, ಜೂ. 27 - ಖರೀದಿದಾರರು ಜಮೀನು ತಗಾದೆಯಲ್ಲಿದೆಯೇ ಎಂಬುದನ್ನು ಸುಲಭವಾಗಿ ತಿಳಿಯುವ ವ್ಯವಸ್ಥೆ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. ಇ- ಕೋರ್ಟ್‌ಗಳನ್ನು ಜಮೀನು ದಾಖಲೆಗಳ ಜೊತೆ ಜೋಡಣೆ ಮಾಡುವ ಮೂಲಕ ಖರೀದಿದಾರರಿಗೆ ನೆರವಾಗಲು ಸರ್ಕಾರ ಉದ್ದೇಶಿಸಿದೆ.

ದೀರ್ಘಾವಧಿಯಲ್ಲಿ ಈ ಕ್ರಮ ವಂಚನಾತ್ಮಕ ವಹಿವಾಟು ತಡೆಯಲಿದೆ. ವಿವಾದಗಳನ್ನು ತಡೆಯಲು ಹಾಗೂ ನ್ಯಾಯಾಲಯಗಳಲ್ಲಿ ಪ್ರಕರಣಗಳು ಹೆಚ್ಚಾಗುವುದನ್ನು ತಡೆಯಲು ಇಂತಹ ಕ್ರಮ ನೆರವಾಗಲಿದೆ ಎಂದು ಕೇಂದ್ರ ಸರ್ಕಾರ ಭಾವಿಸಿದೆ. ಇ-ನ್ಯಾಯಾಲಯಗಳನ್ನು ಭೂ ದಾಖಲೆಗಳು ಹಾಗೂ ನೋಂದಣಿ ಜೊತೆ ಜೋಡಣೆ ಮಾಡುವ ಪ್ರಾಯೋಗಿಕ ಕ್ರಮ ಮಹಾರಾಷ್ಟ್ರ, ಉತ್ತರ ಪ್ರದೇಶ ಹಾಗೂ ಹರಿಯಾಣಗಳಲ್ಲಿ ಯಶಸ್ವಿಯಾಗಿದೆ. ಇದೇ ಮಾದರಿಯನ್ನು ಶೀಘ್ರದಲ್ಲೇ ರಾಷ್ಟ್ರಾದ್ಯಂತ ಜಾರಿಗೆ ತರಲಾಗುವುದು. ರಾಜ್ಯ ಸರ್ಕಾರಗಳು ದಾಖಲೆಗಳನ್ನು ಜೋಡಣೆ ಮಾಡಲು ಎಲ್ಲಾ ಹೈಕೋರ್ಟ್‌ಗಳ ರಿಜಿಸ್ಟ್ರಾರ್ ಜನರಲ್‌ಗಳು ಅನುಮತಿ ನೀಡಬೇಕು ಎಂದು ಕೇಂದ್ರ ಕಾನೂನು ಸಚಿವಾಲಯ ಮನವಿ ಸಲ್ಲಿಸಿದೆ. ತ್ರಿಪುರ, ಮಧ್ಯ ಪ್ರದೇಶ, ರಾಜಸ್ಥಾನ, ಅಸ್ಸಾಂ, ಅರುಣಾಚಲ ಪ್ರದೇಶ, ಮಿಜೋರಾಂ, ನಾಗಾಲ್ಯಾಂಡ್, ಹಿಮಾಚಲ ಪ್ರದೇಶಗಳ ಹೈಕೋರ್ಟ್‌ಗಳು ಸ್ಪಂದಿಸಿವೆ.

## ಮಕ್ಕಳ ಲಸಿಕೆಯಿಂದ ಶಾಲೆ ತೆರೆಯಲು ದಾರಿ

ನವದೆಹಲಿ, ಜೂ. 27 - ಮಕ್ಕಳಿಗೆ ಲಸಿಕೆ ನೀಡುವುದು ಮಹ ತ್ವದ ಮೈಲಿಗಲ್ಲಿನ ಸಾಧನೆಯಾಗಿದೆ ಎಂದಿರುವ ಎಐಐಎಂಎಸ್ ಮುಖ್ಯಸ್ಥ ಡಾ. ರಣದೀಪ್ ಗುಲೇರಿಯ, ಇದ ರಿಂದ ಶಾಲೆಗಳನ್ನು ತೆರೆಯಲು ದಾರಿ ಮಾಡಿಕೊಟ್ಟಂತಾಗಲಿದೆ ಎಂದಿದ್ದಾರೆ.

ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ ಲಸಿಕೆಯನ್ನು 2 ರಿಂದ 18 ವರ್ಷದವರ ಮೇಲೆ ಪ್ರಯೋಗಕ್ಕೆ ಒಳಪಡಿಸಲಾಗಿದೆ. ಸೆಪ್ಟೆಂಬರ್ ವೇಳೆಗೆ ಇದರ ಫಲಿತಾಂಶ ಬರಬಹುದು. ಔಷಧ ನಿಯಂತ್ರಕರು ಒಪ್ಪಿಗೆ ನೀಡಿದರೆ ಆ ವೇಳೆಗೆ ಮಕ್ಕಳಿಗೆ ಲಸಿಕೆ ಲಭ್ಯವಾಗಲಿದೆ ಎಂದವರು ತಿಳಿಸಿದ್ದಾರೆ.

ಅಷ್ಟರೊಳಗೆ ಫೈಜರ್ ಲಸಿಕೆಗೆ ಅನುಮತಿ ದೊರೆತರೆ, ಮಕ್ಕಳಿಗೆ ಮತ್ತೊಂದು ಆಯ್ಕೆ ಸಿಗಲಿದೆ ಎಂದವರು ಹೇಳಿದ್ದಾರೆ.

ಬಹುತೇಕ ಮಕ್ಕಳಲ್ಲಿ ಕೊರೊನಾ ಲಘು ತೀವ್ರತೆ ಹೊಂದಿರುತ್ತದೆ. ಕೆಲವರಲ್ಲಿ ಲಕ್ಷಣ ರಹಿತವಾಗಿರುತ್ತದೆ ಎಂದಿರುವ ಗುಲೇರಿಯ, ಒಂದೂವರೆ ವರ್ಷದಿಂದ ಮುಚ್ಚಿರುವ ಶಾಲೆಗಳನ್ನು ಮತ್ತೆ ತೆರೆಯುವಲ್ಲಿ ಲಸಿಕೆ ಪ್ರಮುಖ ಪಾತ್ರ ವಹಿಸುತ್ತದೆ ಎಂದಿದ್ದಾರೆ. (2ನೇ ಪುಟಕ್ಕೆ)













JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte